ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಸ್. ಸುನೀಲ್ ದತ್ ಯಾದವ್

ಶ್ರೀಮತಿ ನೂರ್ ಅಫ್ಶಾಟ್ ಪರ್ವಿನ್ ಹಾಗೂ ಇತರರು -ವಿರುದ್ಧ ಶ್ರೀ ಹೆಚ್.ಎನ್. ಚಂದ್ರಶೇಖರ್ (ಮೃತ) ರವರ ಕಾನೂನು ವಾರಸುದಾರರು ಹಾಗೂ ಇತರರು

ಆರ್.ಎಸ್.ಎ. 864/2015, ದಿನಾಂಕ 15 ನೇ ಜನವರಿ, 2021.

ತೀರ್ಪು

ನ್ಯಾಯಮೂರ್ತಿ ಶ್ರೀ ಎಸ್. ಸುನೀಲ್ ದತ್ ಯಾದವ್:

ಈ ಅಪೀಲನ್ನು, ಓ.ಎಸ್.ಸಂಖ್ಯೆ:95/2006 ರಲ್ಲಿ ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಜೆಎಂಎಫ್ಸಿ, ತರೀಕೆರೆ ರವರುದಿನಾಂಕ: 26-11-2010 ರಂದು ಹೊರಡಿಸಿದ ತೀರ್ಪು ಮತ್ತು ಡಿಕ್ರಿಯನ್ನು ಸ್ಥಿರೀಕರಿಸಿ, ಆರ್.ಎ. ಸಂಖ್ಯೆ.213/2011 ರಲ್ಲಿ I ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು, ಚಿಕ್ಕಮಗಳೂರು, ಇವರುದಿನಾಂಕ: 27-02-2015 ರಂದು ಹೊರಡಿಸಿದ ತೀರ್ಪ ಮತ್ತು ಡಿಕ್ರಿಯನ್ನು ಪ್ರಶ್ನಿಸಿ ಸಲ್ಲಿಸಲಾಗಿರುತ್ತದೆ.ದೂರುದಾರರು, ಎದುರುದಾರರಿಂದ ದಾವಾ ಅನುಸೂಚಿತ ಸ್ವತ್ತುಗಳ ಸ್ವಾಧೀನವನ್ನು ವಾಪಸ್ಸು ಪಡೆದುಕೊಳ್ಳಲು ಮತ್ತು ದಾವೆಯ ದಿನಾಂಕದಿಂದ ಸ್ವಾಧೀನವನ್ನು ಕೊಟ್ಟ ದಿನಾಂಕದವರೆಗೆ ಮಧ್ಯಕಾಲೀನ ಲಾಭಗಳನ್ನು ನೀಡುವಂತೆ ಕೋರಿ ಸಲ್ಲಿಸಿದ ದಾವೆಯನ್ನು ವಜಾಗೊಳಿಸಲಾಗಿದೆ.

ಪಕ್ಷಕಾರರನ್ನು, ಅನುಕೂಲತೆಯ ಉದ್ದೇಶಕ್ಕಾಗಿ ಅಧಿವಿಚಾರಣಾ ನ್ಯಾಯಾಲಯದ ಮುಂದೆ ಅವರು ಹೊಂದಿದ್ದ ಶ್ರೇಣಿಗಳ ಮೂಲಕವೇ ಇಲ್ಲಿ ಉಲ್ಲೇಖಿಸಲಾಗಿದೆ.

1. ಮೊಕದ್ದಮೆಯ ಸಂಗತಿಗಳು:

(1) ದೂರುದಾರರು, ದಿವಂಗತ ಶ್ರೀಮತಿ ತೈರುನ್ನಿಸಾರವರ ಮಕ್ಕಳಾಗಿದ್ದು, ಅವರು ಆಕೆಗೆ ಸೇರಿದ ದಾವಾ ಅನುಸೂಚಿತ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಅವರ ಹಕ್ಕುಗಳನ್ನು ಸ್ಥಿರೀಕರಿಸಲು ಕೋರಿರುತ್ತಾರೆ.ದಾವಾ ಅನುಸೂಚಿತ ಸ್ವತ್ತುಗಳು, ಆಕೆಯ ಸಹೋದರ ಶ್ರೀ ಖಾಸಿಂಸಾಬ್ ವಿರುದ್ಧ ಸಲ್ಲಿಸಿದ ಓ.ಎಸ್.ಸಂಖ್ಯೆ.317/1956 ರಲ್ಲಿ ಸ್ವತ್ತಿನ ಪಾಲಿಗಾಗಿ ವ್ಯವಹರಣೆಗಳಲ್ಲಿ ಶ್ರೀಮತಿ ತೈರುನ್ನೀಸಾ ರವರ ಪಾಲಿಗೆ ಬಂದಿವೆ ಎಂದು ಹೇಳಲಾಗಿರುತ್ತದೆ.ದಾವಾ ಅನುಸೂಚಿತ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಶ್ರೀ ಹೆಚ್.ಸಿ. ನಾಗಪ್ಪ ಮತ್ತು ಶ್ರೀಮತಿ ತೈರುನ್ನಿಸಾ ನಡುವೆದಿನಾಂಕ: 29.08.1968 ರಂದು ಮಾರಾಟ ಒಪ್ಪಂದವನ್ನು ಮಾಡಿಕೊಳ್ಳಲಾಗಿತ್ತು ಮತ್ತು ಭಾವೀ ಖರೀದಿದಾರನು (ಇದರಲ್ಲಿ ಇನ್ನು ಮುಂದೆ " ಖರೀದಿದಾರ " ನೆಂದು ಉಲ್ಲೇಖಿಸಲಾಗಿದೆ), ಸದರಿ ಒಪ್ಪಂದದ ಮೇರೆಗೆ ಸ್ವಾಧೀನಕ್ಕೆ ತೆಗೆದುಕೊಂಡಿದ್ದನು.ಮಾಲೀಕರಾದ ಶ್ರೀಮತಿ ತೈರುನ್ನಿಸಾರವರನ್ನು ಆಕೆಯ ಕಾನೂನು ಸಮ್ಮತ ಪ್ರತಿನಿಧಿಗಳು ಪ್ರತಿನಿಧಿಸುತ್ತಿದ್ದರೆ, ಖರೀದಿದಾರರಾದ ಶ್ರೀ ಹೆಚ್.ಸಿ. ನಾಗಪ್ಪನನ್ನು, ಪ್ರಸ್ತುತ ವ್ಯವಹರಣೆಗಳಲ್ಲಿ ಆತನ ಕಾನೂನುಸಮ್ಮತ ಪ್ರತಿನಿಧಿಗಳು ಪ್ರತಿನಿಧಿಸಿರುತ್ತಾರೆ.

(ii) ಮಾರಾಟ ವ್ಯವಹಾರವು ಮಾರಾಟ ಪತ್ರದಲ್ಲಿ ಅಂತ್ಯಗೊಳ್ಳದ ಕಾರಣ ಮತ್ತು ತಾತ್ಪರ್ಯವಾಗಿ ಖರೀದಿದಾರನು ಕೊಂಡುಕೊಳ್ಳಲು ಮುಂದೆ ಬಾರದ ಕಾರಣ, ಶ್ರೀಮತಿ ತೈರುನ್ನಿಸಾ ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರಕ್ಕಾಗಿ ಕೋರಿ ಶ್ರೀ ಹೆಚ್.ಸಿ. ನಾಗಪ್ಪರವರ ವಿರುದ್ಧ ಓ.ಎಸ್. ಸಂಖ್ಯೆ.53/1972 ಅನ್ನು ಸಲ್ಲಿಸಿದರು.ಆದಾಗ್ಯೂ, ಸದರಿ ದಾವೆಯನ್ನು ಗಮನಕ್ಕೆ ತೆಗೆದುಕೊಂಡು ಮಾರಾಟದ ಒಪ್ಪಂದದ

ಅನುಸಾರವಾಗಿ ಶ್ರೀ ಹೆಚ್.ಸಿ. ನಾಗಪ್ಪರವರಿಗೆ ಸ್ವತ್ತಿನ ಅನುಭೋಗವನ್ನು ನೀಡಿರುವುದು ಸಾಬೀತಾಗಿರುವುದರಿಂದ ನಿರ್ಬಂಧಕಾಜ್ಞೆಯ ದಾವೆಯನ್ನು ಸಮರ್ಥಿಸಲಾಗುವುದಿಲ್ಲವೆಂದು, ನಿರ್ಣಯವನ್ನು ದಾಖಲಿಸುವಾಗ ಸದರಿ ದಾವೆಯನ್ನುದಿನಾಂಕ: 14.12.1973 ರಂದು ವಜಾಗೊಳಿಸಲಾಯಿತು.

(iii) ಏತನ್ಮಧ್ಯೆ, ಸಾಲಗಾರರಾದ ಶ್ರೀಮತಿ ರುದ್ರಮ್ಮರವರು ಮರುಪಾವತಿಯಲ್ಲಿ ತಪ್ಪಿದ ಕಾರಣ ಶ್ರೀಮತಿ ತೈರುನ್ನಿಸಾರವರಿಗೆ ಆಕೆಯು ನೀಡಿದ್ದ ಮುಂಗಡ ಹಣವನ್ನು ವಾಪಸ್ಸು ಪಡೆದುಕೊಳ್ಳಲು ದಾವೆಯನ್ನು ಹೂಡಿದ್ದರು.ಅಮಲ್ಜಾರಿ ಅರ್ಜಿಸಂಖ್ಯೆ: 69/1982 ರಲ್ಲಿನ ಸದರಿ ವ್ಯವಹರಣೆಗಳ ಸಮಯದಲ್ಲಿ, ಅನುಸೂಚಿತ ಸ್ವತ್ತುಗಳನ್ನು ಲಗತ್ತಿಸಲಾಗಿತ್ತು.ಖರೀದಿದಾರರಾದ, ಶ್ರೀ ಹೆಚ್.ಸಿ. ನಾಗಪ್ಪ, ಸಂಕೀರ್ಣ ಮೊಕದ್ದಮೆಸಂಖ್ಯೆ: 14/1983 ರನ್ನು ಸಲ್ಲಿಸಿ ದಿನಾಂಕ 25.07.1987 ರ ಆದೇಶದ ಮೇರೆಗೆ ಅನುಸೂಚಿತ ಸ್ವತ್ತುಗಳನ್ನು ಜಪ್ತಿಯಿಂದ ಬಿಡುಗಡೆಗೊಳಿಸಿ ಪಡೆದುಕೊಂಡಿದ್ದರು.

(iv) ತದನಂತರ,ದಿನಾಂಕ: 01.03.1989 ರಂದು ಶ್ರೀ ಹೆಚ್.ಸಿ. ನಾಗಪ್ಪ ರವರು ಶ್ರೀಮತಿ ತೈರುನ್ನಿಸಾ ರವರ ವಿರುದ್ಧ ನಿರ್ದಿಷ್ಟ ಪಾಲನೆಗಾಗಿ ಓ.ಎಸ್.ಸಂಖ್ಯೆ.237/1989 ರಲ್ಲಿ ದಾವೆಯನ್ನು ಹೂಡಿದ್ದು ಅದನ್ನುದಿನಾಂಕ: 29.06.1991 ರಂದು ವಜಾಗೊಳಿಸಲಾಯಿತು.ಇದರಿಂದ ಬಾಧಿತರಾಗಿ, ದಾವೆಯನ್ನು ವಜಾಗೊಳಿಸಿರುವ ತೀರ್ಪನ್ನು ಪ್ರಶ್ನಿಸಿ ಆರ್.ಎ.ಸಂಖ್ಯೆ: 50/1991 ರನ್ನು ಸಲ್ಲಿಸಲಾಯಿತು.ಪ್ರತಿಕೂಲ ಸ್ವಾಧೀನದ ಮೂಲಕ ಸ್ವಾಮ್ಯ ಘೋಷಣೆಯ ಪರಿಹಾರವನ್ನು ಸೇರಿಸಲು ವಾದವನ್ನು ತಿದ್ದುಪಡಿಮಾಡುವಂತೆ ಸಿವಿಲ್ ಪ್ರಕ್ರಿಯಾ ಸಂಹಿತೆಯ 17 ನೇ ನಿಯಮದ, ಕ್ರಮಾದೇಶ VI ರ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಲಾಯಿತೆಂಬುದು ಗಮನಿಸಬೇಕಾದ ಸಂಗತಿ.ಸದರಿ ಅಪೀಲಿನ ವ್ಯವಹರಣೆಗಳಲ್ಲಿ, ಓ.ಎಸ್.ಸಂಖ್ಯೆ.237/1989 ರಲ್ಲಿನ ತೀರ್ಪು ಮತ್ತು ಡಿಗ್ರಿಯನ್ನು ಅಧಿವಿಚಾರಣಾ ನ್ಯಾಯಾಲಯಕ್ಕೆ ವಿಷಯವನ್ನು ಪುನರ್ವಿಚಾರಣೆಗಾಗಿ ವಾಪಸ್ಸು ಕಳಿಸಿ ರದ್ದುಗೊಳಿಸಲಾಯಿತು.ಆರ್.ಎ.ಸಂಖ್ಯೆ.50/1991 ರಲ್ಲಿನ ತೀರ್ಪು ಮತ್ತು ಡಿಕ್ರಿಯ ವಿರುದ್ಧ ಹೂಡಲಾದ ಎಂ.ಎಸ್.ಎ. ಸಂಖ್ಯೆ.142/1994 ರಲ್ಲಿ ಹೊರಡಿಸಿದ ಆದೇಶದ ಮೇರೆಗೆ ಐದು ತಿಂಗಳುಗಳ ಅವಧಿಯ ಒಳಗಾಗಿ ಅಪೀಲನ್ನು ತೀರ್ಮಾನಿಸಬೇಕಾಗಿತ್ತು ಎ ಂ ಬ ನಿರ್ದೇಶನದೊಂದಿಗೆ, ತರುವಾಯ ಪುನರ್ವಿಚಾರಣೆಗಾಗಿ ವಾಪಸ್ಸು ಕಳಿಸಿದ ಆದೇಶವನ್ನು ರದ್ದುಗೊಳಿಸಲಾಯಿತು.

( v) ಪುನರ್ ವಿಚಾರಣೆಗಾಗಿ ವಾಪಸ್ಸು ಕಳುಹಿಸುವ ಆದೇಶದ ಪರಿಣಾಮವಾಗಿ, ಅಪೀಲು ವ್ಯವಹರಣೆಗಳನ್ನು ಪುನರಾರಂಭಿಸಿದ ತರುವಾಯ, ಶ್ರೀ ಹೆಚ್.ಸಿ. ನಾಗಪ್ಪರವರು, ಪ್ರತಿಕೂಲ ಸ್ವಾಧೀನದ ಪರಿಹಾರಕ್ಕೆ ಸಂಬಂಧಿಸಿದಂತೆ ಮಾತ್ರ ಕೇಮನ್ನು ನಿರ್ಬಂಧಿಸುವಾಗ ನಿರ್ದಿಷ್ಟ ಪಾಲನೆಯ ಪರಿಹಾರಕ್ಕೆ ಸಂಬಂಧಿಸಿದಂತೆ ತನ್ನ ಕ್ಲೇಮನ್ನು ಕೈಬಿಟ್ಟುದಿನಾಂಕ: 03.03.2000 ರಂದು ಮೆಮೊ ಸಲ್ಲಿಸಿದರು.ದಿನಾಂಕ: 17.01.2005 ರ ಂ ದು ಆರ್.ಎ.ಸ ಂ ಖ್ಯೆ:50/1991 ಅನ್ನು ವಜಾಗೊಳಿಸಲಾಯಿತು.ಇದನ್ನು ಆರ್.ಎಸ್.ಎ.ಸಂಖ್ಯೆ:1034/2005 ರಲ್ಲಿನ ಅಪೀಲಿನಲ್ಲಿ ಹೂಡಲಾಗಿದ್ದು, ಅದನ್ನು ಸಹದಿನಾಂಕ: 12.12.2005 ರಂದು ವಜಾಗೊಳಿಸಲಾಯಿತು.

(vi) ಆದಾಗ್ಯೂ, ಈ ನ್ಯಾಯಾಲಯವು ಎರಡನೇ ಅಪೀಲನ್ನು ವಿಲೆ ಮಾಡುವಾಗ, ಒಬ್ಬ ವ್ಯಕ್ತಿ ಮಾರಾಟ ಒಪ್ಪಂದದ ಅನುಸಾರವಾಗಿ ಸ್ವಾಧೀನದಲ್ಲಿರುವನೆಂದು ಬ ಒಮ್ಮೆ ಕ್ಲೇಮು ಮಾಡಿದರೆ, ಪ್ರತಿಕೂಲ ಸ್ವಾಧೀನದ ಆ ಕ್ಲೇಮನ್ನು ಎತ್ತಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟಿತ್ತು.ಪ್ರತಿಕೂಲ ಸ್ವಾಧೀನವನ್ನು ಪರಿಗಣಿಸಬೇಕಾಗಿದ್ದರೂ ಸಹ, ಅದಕ್ಕೆ ಸಂಬಂಧಿಸಿದ ಕ್ಲೇಮನ್ನು ಒಪ್ಪಂದದ ನಿರ್ದಿಷ್ಟ ಪಾಲನೆಯ ಮನವಿಯನ್ನು ಕೈಬಿಟ್ಟು ಮತ್ತು ಪ್ರತಿಕೂಲ ಸ್ವಾಧೀನಕ್ಕೆ ಸಂಬಂಧಿಸಿದಂತೆ ಮಾತ್ರ ಕೇಮನ್ನು ನಿರ್ಬಂಧಿಸಿ

ಮೊದಲನೇ ಅಪೀಲು ನ್ಯಾಯಾಲಯದ ಮುಂದೆ ಮೆಮೊವನ್ನು ಸಲ್ಲಿಸಿದ್ದದಿನಾಂಕ: 03.03.2000 ದಿಂದ ಮಾತ್ರ ಪರಿಗಣಿಸಬೇಕಾಗಿತ್ತು ಎಂದು ಅಭಿಪ್ರಾಯಪಟ್ಟಿತ್ತು.

(vii) ಅಲ್ಲದೆ, ಖರೀದಿದಾರನು ಒಪ್ಪಿಕೊಂಡಿರುವಂತೆ ಅವನು ಸ್ವತ್ತಿನ ಸ್ವಾಧೀನತೆಯಲ್ಲಿರುವುದರಿಂದ, ಅದನ್ನು ಸ್ವಾಧೀನಕ್ಕೆ ಪಡೆದುಕೊಳ್ಳಲು ದಾವೆಯನ್ನು ಹೂಡುವ ಮೂಲಕ ಕಾನೂನಿಗನುಸಾರವಾಗಿ ಮಾತ್ರ ಹೊರಹಾಕಬಹುದೆಂದು ನ್ಯಾಯಾಲಯವು ಅಭಿಪ್ರಾಯಪಟ್ಟಿದೆ.

(viii) ಆರ್.ಎಸ್.ಎ.ಸಂಖ್ಯೆ: 1034/2005 ರ ವಿಲೆಯ ತರುವಾಯ, ಸ್ವಾಧೀನವನ್ನು ಪಡೆದುಕೊಳ್ಳುವ ಪರಿಹಾರವನ್ನು ಮತ್ತು ಮಧ್ಯಕಾಲೀನ ಲಾಭವನ್ನು ನೀಡಲು ಕೋರಿ ಪ್ರಸ್ತುತ ದಾವೆಯನ್ನು, ಎಂದರೆ, ಓ.ಎಸ್.ಸಂಖ್ಯೆ 95/2006 ರನ್ನು ಹೂಡಲಾಯಿತು.

(ix) ಪಕ್ಷಕಾರರ ಮನವಿಗಳ ಆಧಾರದ ಮೇಲೆ, ಅಧಿವಿಚಾರಣಾ ನ್ಯಾಯಾಲಯವು, ಈ ಮುಂದಿನ ವಿವಾದಾಂಶಗಳನ್ನು ರೂಪಿಸಿದ್ದು, ಅವು ಎತ್ತಲಾದ ವಾದಗಳನ್ನು ಪ್ರತಿಬಿಂಬಿಸುತ್ತವೆ:

1) ದೂರುದಾರರು, ಎದುರುದಾರರಿಂದ ದಾವಾ ಅನುಸೂಚಿತ ಸ್ವತ್ತುಗಳ ಸ್ವಾಧೀನತೆಗಾಗಿ ಅರ್ಹರಿದ್ದಾರೆ ೦ ದು ಅವರು ಸಾಬೀತು ಪಡಿಸಿರುತ್ತಾರೆಯೇ?

2) ದೂರುದಾರರು, ಸ್ವಾಧೀನತೆಯ ನೀಡಿಕೆಯ ದಿನಾಂಕದಿಂದ ಮಧ್ಯಕಾಲೀನ ಲಾಭಗಳಿಗಾಗಿ ಅರ್ಹರಾಗಿರುವರೇ (ಎಸ್‌ಐಸಿ)?

3) ಪ್ರತಿದೂರುದಾರರು, ಪ್ರತಿಕೂಲ ಸ್ವಾಧೀನತೆಯ ಮೂಲಕ ತಮ್ಮ ಹಕ್ಕು ಸ್ವಾಮ್ಯವನ್ನು ಸಂಪೂರ್ಣವಾಗಿ ನೆರವೇರಿಸಿಕೊಂಡಿದ್ದಾರೆ ಎಂಬುದನ್ನು ಸಾಬೀತುಪಡಿಸಿರುತ್ತಾರೆಯೇ?

4) ದಾವೆಯನ್ನು ಕಾಲ ಪರಿಮಿತಿಯಿ ೦ ದ ನಿರ್ಬಂಧಿಸಲಾಗಿದೆ ಎಂಬುದನ್ನು ಎದುರುದಾರರು ಸಾಬೀತುಪಡಿಸಿರುತ್ತಾರೆಯೇ?

5) ದಾವೆಯು, ಭಾವಿತ ಪೂರ್ವ ನ್ಯಾಯ ನಿರ್ಣಯದಿ ೦ ದ ಗುರಿಯಾಗಿರುತ್ತದೆ ೦ ದು ಎದುರುದಾರರು ಸಾಬೀತು ಪಡಿಸಿರುತ್ತಾರೆಯೇ?

6) ಯಾವ ಡಿಕ್ರಿ ಅಥವಾ ಯಾವ ಆದೇಶ? "

2. ಆರಂಭ ವಿಚಾರಣೆಯ ನ್ಯಾಯಾಲಯದ ನಿರ್ಣಯಗಳು:

(i) ಓ.ಎಸ್.ಸಂಖ್ಯೆ .95/2006 ರ ದಾವೆಯನ್ನುದಿನಾಂಕ: 26.11.2010 ರ ತೀರ್ಪು ಮತ್ತು ಡಿಗ್ರಿಯ ಮೂಲಕ ವಜಾಗೊಳಿಸಲಾಯಿತು.ದೂರುದಾರರು ಸ್ವಾಮ್ಯದ ಘೋಷಣೆಯ ಪರಿಹಾರವನ್ನು ಕೋರದೆ ಸ್ವಾಧೀನಕ್ಕೆ ಅರ್ಹವಾಗಿರುವುದಿಲ್ಲವೆಂದು ಅಧಿವಿಚಾರಣಾ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ.3 ನೇ ವಿವಾದಾಂಶ ಸಂಖ್ಯೆಗೆ ಸಂಬಂಧಿಸಿದಂತೆ, ಎದುರುದಾರ ಶ್ರೀ ಹೆಚ್.ಸಿ. ನಾಗಪ್ಪ 1971 ನೇ ವರ್ಷದಿಂದ ಸ್ವಾಧೀನದಲ್ಲಿದ್ದು, ಪ್ರತಿಕೂಲ ಸ್ವಾಧೀನದ ಮೂಲಕ ತನ್ನ ಸ್ವಾಮ್ಯವನ್ನು ಸಂಪೂರ್ಣವಾಗಿ ನೆರವೇರಿಸಿಕೊಂಡಿದ್ದಾನೆಂದು ನ್ಯಾಯಾಲಯವು ಸಕಾರಾತ್ಮಕವಾಗಿ ತೀರ್ಪನ್ನು ನೀಡಿದೆ.4 ನೇ ವಿವಾದಾಂಶಕ್ಕೆ ಸಂಬಂಧಪಟ್ಟಂತೆ, ಪ್ರತಿಕೂಲ ಸ್ವಾಧೀನದ ಸಂಬಂಧವಾಗಿ ಮಾತ್ರ ಪರಿಹಾರವನ್ನು ನಿರ್ಬಂಧಿಸುವಾಗ, ನಿರ್ದಿಷ್ಟ ಪಾಲನೆಗೆ ಸಂಬಂಧಿಸಿದಂತೆ

ತನ್ನ ಮನವಿಯನ್ನು ಕೈಬಿಟ್ಟು ಎದುರುದಾರನು ಮೆಮೋವನ್ನು ಸಲ್ಲಿಸಿದ ದಿನಾಂಕ 03.03.2000 ರಂದು ವ್ಯಾಜ್ಯ ಕಾರಣವು ಉದ್ಭವಿಸಿದೆ ಎಂಬ ಅಂಶವನ್ನು ಪರಿಗಣಿಸಿ ಮತ್ತು ಸ್ವಾಧೀನವನ್ನು ವಾಪಸ್ಸು ಪಡೆದುಕೊಳ್ಳುವುದಕ್ಕಾಗಿ ವ್ಯವಹರಣೆಗಳನ್ನು ಪ್ರಾರಂಭಿಸಲು ಪ್ರಸ್ತುತ ದೂರುದಾರರಿಗೆ ಸ್ವಾತಂತ್ರ್ಯವನ್ನು ಕಾಯ್ದಿರಿಸಿ ಆರ್.ಎಸ್.ಎ.ಸಂಖ್ಯೆ: 1034/2005 ರಲ್ಲಿ ಮಾಡಲಾದ ಅಭಿಪ್ರಾಯಗಳನ್ನು ಗಮನಿಸಿ ದಾವೆಯನ್ನು ಸಕಾಲದಲ್ಲಿ ಸಲ್ಲಿಸಲಾಗಿದೆ ಎಂದು ಅಭಿಪ್ರಾಯಪಡಲಾಯಿತು.

(ii) ಭಾವಿತ ಪೂರ್ಣ ನ್ಯಾಯ ನಿರ್ಣಯದ ತತ್ವದ ಆಧಾರದ ಮೇಲೆ ದಾವೆಯ ಪ್ರತಿಷೇದಕ್ಕೆ ಸಂಬಂಧಿಸಿದ 5 ನೇ ವಿವಾದಾಂಶಕ್ಕೆ ಸಂಬಂಧಿಸಿದಂತೆ ಅಧಿವಿಚಾರಣಾ ನ್ಯಾಯಾಲಯವು, ಶ್ರೀಮತಿ ತೈರುನ್ನಿಸಾರವರು ಒಪ್ಪಂದದ ನಿರ್ದಿಷ್ಟ ಪಾಲನೆಯನ್ನು ಕೋರಿ ಸಲ್ಲಿಸಿದ್ದ ಓ.ಎಸ್.ಸಂಖ್ಯೆ .237/1989 ರ ದಾವೆಯಲ್ಲಿ ಪ್ರತಿ ಕೇಮಿನ ಮೂಲಕ ಸ್ವಾಧೀನವನ್ನು ಕ್ಲೇಮು ಮಾಡಬೇಕಾಗಿತ್ತೆಂದು ಅಭಿಪ್ರಾಯಪಟ್ಟು ಸಕಾರಾತ್ಮಕವಾಗಿ ತೀರ್ಪು ನೀಡಿತು.ತದನುಸಾರವಾಗಿ, ದಾವೆಯನ್ನು ವಜಾಗೊಳಿಸಲಾಯಿತು.

3. ಮೊದಲನೇ ಅಪೀಲು ನ್ಯಾಯಾಲಯದ ನಿರ್ಣಯಗಳು:

( i) ಆರ್.ಎ. ಸಂಖ್ಯೆ.213/2011 ರಲ್ಲಿ ಈ ಮುಂದಿನ ಅಂಶಗಳನ್ನು ಪರಿಗಣನೆಗಾಗಿ ರೂಪಿಸಲಾಯಿತು:

" 1) ದೂರುದಾರರ ತಾಯಿ ಮಾಲೀಕರಾಗಿದ್ದರೂ ಮತ್ತು ಸ್ವಾಮ್ಯವನ್ನು ಹೊಂದಿದ್ದರೂ, ವಿವಾದಾಂಶ ಸಂಖ್ಯೆ.1, 2 ಮತ್ತು 4 ಕ್ಕೆ ನಕಾರಾತ್ಮಕವಾಗಿ ಉತ್ತರಿಸುವಲ್ಲಿ ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು ಪ್ರಮಾದ ಎಸಗಿದ್ದಾರೆಯೇ?

2) ನಿರ್ದಿಷ್ಟ ಪಾಲನೆಗಾಗಿ ಓ.ಎಸ್.ಸಂಖ್ಯೆ .237/1969 (ಎಸ್ಐಎನ್) ರಲ್ಲಿ ಎದುರುದಾರರ ತಂದೆಯು ಸಲ್ಲಿಸಿದ ದಾವೆಯನ್ನು, ಕಾಲ ಪರಿಮಿತಿಯ ಕಾರಣದ ಮೇಲೆ ವಜಾಗೊಳಿಸಿದಾಗ ವಿವಾದಾಂಶ ಸಂಖ್ಯೆ 3 ಮತ್ತು ವನ್ನು ದೃಢೀಕರಿಸುವಲ್ಲಿ ಅಧಿವಿಚಾರಣಾ ಅ ನ್ಯಾಯಾಲಯವು ಪ್ರಮಾದ ಎಸಗಿದೆಯೇ?

3) ದೂರುದಾರರು ಎದುರುದಾರರ ಸ್ವಾಧೀನವನ್ನು, ಕಾನೂನು ಬಾಹಿರವಾಗಿದೆಯೆಂದು ಮತ್ತು ಅಕ್ರಮವಾಗಿದೆಯೆಂದು ಸಾಬೀತುಪಡಿಸಿದಾಗ ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು, ಸ್ವಾಧೀನದ ಪರಿಹಾರವನ್ನು ನೀಡದೇ ಪ್ರಮಾದ ಎಸಗಿದ್ದಾರೆಯೇ?

4) ಎದುರುದಾರರು ಪ್ರತಿಕೂಲ ಸ್ವಾಧೀನದ ಮೂಲಕ ತಮ್ಮ ಸ್ವಾಮ್ಯವನ್ನು ಸಂಪೂರ್ಣವಾಗಿ ಹೊಂದಿದ್ದಾರೆಂದು ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು ತೀರ್ಮಾನಿಸುವಲ್ಲಿ ಪ್ರಮಾದ ಎಸಗಿದ್ದಾರೆಯೇ

5) ಅಧಿವಿಚಾರಣಾ ನ್ಯಾಯಾಲಯದ ತೀರ್ಪು ಬಗ್ಗೆ ಈ ನ್ಯಾಯಾಲಯವು ಹಸ್ತಕ್ಷೇಪ ಮಾಡಲು ಅವಕಾಶ ನೀಡುತ್ತದೆಯೇ?

6) ಯಾವ ಆದೇಶ? "

(ii) ಸ್ವಾಧೀನದ ದಾವೆಯು ಸ್ವಾಧೀನವನ್ನು ತಪ್ಪಿಸುವ ಆಧಾರದ ಮೇಲೆ ಇಲ್ಲದಿರುವುದರಿಂದ ಕಾಲ ಪರಿಮಿತಿ ಅಧಿನಿಯಮ, 1963 ರ 64 ನೇ ಅನುಚ್ಛೇದವು ಅನ್ವಯವಾಗುವುದಿಲ್ಲವೆಂದು ಮೊದಲ ಅಪೀಲು ನ್ಯಾಯಾಲಯವು ತೀರ್ಮಾನಿಸಿತ್ತು.ಕಾಲ ಪರಿಮಿತಿ ಅಧಿನಿಯಮದ 65 ನೇ ಅನುಚ್ಛೇದದ ಅನ್ವಯತೆಯ

ಸಂಬಂಧದಲ್ಲಿ, ಶ್ರೀಮತಿ ತೈರುನ್ನಿಸಾರ ಕ್ಲೇಮು, ಕಂದಾಯ ದಾಖಲೆಗಳ ಆಧಾರದ ಮೇಲಿದೆಯೆಂದು ಮತ್ತು ಶ್ರೀಮತಿ ತೈರುನ್ನಿಸಾ ಮತ್ತು ಆಕೆಯ ಸಹೋದರ ಶ್ರೀ ಕಾಸಿಂಸಾಬ್ ನಡುವೆ ಯಾವುದೇ ವಿನಿಮಯ ಪತ್ರ ಇಲ್ಲದಿರುವುದರಿಂದ, ಕಾಲ ಪರಿಮಿತಿ ಅಧಿನಿಯಮದ 65 ನೇ ಅನುಚ್ಛೇದದ ಅಡಿಯಲ್ಲಿ ಸ್ವಾಮ್ಯದ ಆಧಾರದ ಮೇಲೆ ದಾವೆಯನ್ನು ಸಮರ್ಥಿಸಲಾಗುವುದಿಲ್ಲವೆಂದು ತೀರ್ಪನ್ನು ನೀಡಲಾಯಿತು.

(iii) ವಿವಾದಾಂಶ ಸಂಖ್ಯೆ 3 ನ್ನು ಕುರಿತಂತೆ ಅಧಿವಿಚಾರಣಾ ನ್ಯಾಯಾಲಯವು ಎದುರುದಾರರು ಅವರು ಪ್ರತಿಕೂಲ ಸ್ವಾಧೀನದ ಮೂಲಕ ಅವರ ಸ್ವಾಮ್ಯವನ್ನು ಪರಿಪೂರ್ಣಗೊಳಿಸಿದ್ದರೆಂದು ಸಾಬೀತುಪಡಿಸಲಾಗಿತ್ತು ಎಂದು ನೀಡಿರುವ ನಿರ್ಣಯದ ಸಂಬಂಧದಲ್ಲಿ ಮೊದಲ ಅಪೀಲು ನ್ಯಾಯಾಲಯವು ನಿರ್ದಿಷ್ಟ ಪಾಲನೆಯ ಮನವಿಯನ್ನು ಕೈಬಿಟ್ಟುದಿನಾಂಕ: 03.03.2000 ರಂದು ಮೆನೋವನ್ನು ಸಲ್ಲಿಸುವವರೆಗೂ ಎದುರುದಾರರು ಅವರದೇ ಆದ ಹಕ್ಕಿನಲ್ಲಿ ಸ್ವತ್ತನ್ನು ಹೊಂದಲು ಯಾವುದೇ ಪ್ರತಿಕೂಲ ಉದ್ದೇಶವಿರಲಿಲ್ಲವಾದ್ದರಿಂದ 3 ನೇ ವಿವಾದಾಂಶದ ಬಗ್ಗೆ ಅಧಿವಿಚಾರಣಾ ನ್ಯಾಯಾಲಯವು ನೀಡಿದ ನಿರ್ಣಯಗಳು ತಪ್ಪಿನಿಂದ ಕೂಡಿದ್ದವು ಎಂಬ ನಿರ್ಣಯಕ್ಕೆ ಬಂದಿತ್ತು ಮತ್ತು ಪ್ರಸ್ತುತ ದಾವೆ, ಎಂದರೆ, ಓ.ಎಸ್.ಸಂಖ್ಯೆ:95/2006 ರನ್ನು 2006 ರಲ್ಲಿ ಸಲ್ಲಿಸಲಾಗಿರುವುದರಿಂದ (ಮೆಮೋವನ್ನು ಸಲ್ಲಿಸಿದ ದಿನಾಂಕದಿಂದ 12 ವರ್ಷಗಳ ಒಳಗಾಗಿ) ಎದುರುದಾರರು, ಪ್ರತಿಕೂಲ ಸ್ವಾಧೀನದ ಮೂಲಕ ಅವರ ಸ್ವಾಮ್ಯವನ್ನು ಪರಿಪೂರ್ಣಗೊಳಿಸಿದ್ದರೆಂಬ ನಿರ್ಣಯವು ತಪ್ಪಾಗಿತ್ತೆಂದು ಅಭಿಪ್ರಾಯ ಪಡಲಾಗಿದೆ.

(iv) ದಾವೆಯನ್ನು ಸಕಾಲದಲ್ಲಿ ಹೂಡಲಾಗಿತ್ತು ಎಂಬುದಾಗಿ 4 ನೇ ವಿವಾದಾಂಶದ ಬಗ್ಗೆ ಅಧಿವಿಚಾರಣಾ ನ್ಯಾಯಾಲಯವು ನೀಡಿದ ನಿರ್ಣಯಕ್ಕೆ ಸಂಬಂಧಿಸಿದಂತೆ ೧ ಮೊದಲ ಅಪೀಲು ನ್ಯಾಯಾಲಯವು, ಮಾರಾಟದ ಒಪ್ಪಂದವನ್ನುದಿನಾಂಕ: 01.01.1971 ರಂದು ರದ್ದು ಮಾಡಿದಾಗ, ಶ್ರೀಮತಿ ತೈರುನ್ನಿಸಾರವರು ಶ್ರೀ ಹೆಚ್.ಸಿ. ನಾಗಪ್ಪರವರ ವಿರುದ್ಧ ಸ್ವಾಧೀನಕ್ಕಾಗಿ ದಾವೆಯನ್ನು ಹೂಡಬೇಕಾಗಿತ್ತು ಎಂದು ಅಭಿಪ್ರಾಯಪಡುವಾಗ ಅಂಥ ನಿರ್ಣಯದೊಂದಿಗೆ ಭಿನ್ನವಾಗಿತ್ತು.ಅಲ್ಲದೆ, ತಡೆಯಾಜ್ಞೆಗಾಗಿ ಎದುರುದಾರರ ವಿರುದ್ಧ ಸಲ್ಲಿಸಿದ್ದ ಓ.ಎಸ್.ಸಂಖ್ಯೆ 53/1972 ನ್ನು, ಎದುರುದಾರರು ಸ್ವಾಧೀನದಲ್ಲಿದ್ದರು ಮತ್ತು ಕನಿಷ್ಠ ಅಂತಹ ದಿನಾಂಕದಿಂದ ಪರಿಮಿತಿಯು ಚಲಾವಣೆ ಮಾಡಲಾರಂಭಿಸಲಾಗಿತ್ತು ಎಂದು ದೃಢೀಕರಿಸುವ ಮೂಲಕ ವಜಾಗೊಳಿಸಬೇಕಾಗಿ ಬಂತು ಎಂಬುದನ್ನು ಗಮನಿಸಲಾಗಿದೆ.ತದನುಸಾರವಾಗಿ, ಸ್ಥಿರ ಸ್ವತ್ತಿನಿಂದ ವಿಲೇವಾರಿಯಾದ 12 ವರ್ಷಗಳ ಅವಧಿಯೊಳಗಾಗಿ ಸ್ವಾಧೀನವನ್ನು ಪಡೆದುಕೊಳ್ಳಲು ದಾವೆಯನ್ನು ಹೂಡಬೇಕಾದ ಕಾನೂನಿನ ಅವಶ್ಯಕತೆಯ ಹಿನ್ನಲೆಯಲ್ಲಿ, ಕಾಲ ಪರಿಮಿತಿ ಅಧಿನಿಯಮ, 1963 ರ 27 ನೇ ಅನುಚ್ಛೇದದ ಪ್ರಕಾರ ಸ್ವಾಧೀನವನ್ನು ಮರುಪಡೆದುಕೊಳ್ಳುವ ದೂರುದಾರರ ಹಕ್ಕನ್ನು ಸ್ಥಗಿತಗೊಳಿಸಲಾಗಿದೆ ಎಂದು ಅಭಿಪ್ರಾಯಪಡಲಾಯಿತು.ಇದರ ಪರಿಣಾಮವಾಗಿ, 3ನೇ ಮತ್ತು 4 ನೇ ವಿವಾದಾಂಶಗಳ ಕುರಿತಂತೆ ಆರಂಭದ ವಿಚಾರಣೆಯ ಸಂಬಂಧದಲ್ಲಿ ನ್ಯಾಯಾಲಯದ ನಿರ್ಣಯಗಳು ಭಿನ್ನವಾಗಿದ್ದರೂ ಓ.ಎಸ್. ಸಂಖ್ಯೆ 95/2006 ರಲ್ಲಿನ ತೀರ್ಪು ಮತ್ತು ಡಿಕ್ರಿಯನ್ನು ಸ್ಥಿರೀಕರಿಸುವ ಮೂಲಕ ಅಪೀಲನ್ನು ವಜಾಗೊಳಿಸಲಾಯಿತು.

(v) ಪ್ರಸ್ತುತ ಎರಡನೇ ಅಪೀಲನ್ನು ಈ ಮುಂದಿನ ಕಾನೂನಿನ ಗಮನಾರ್ಹ ಪ್ರಶ್ನೆಯ ಮೇಲೆ ಅಂಗೀಕರಿಸಬೇಕಾಗಿ ಬಂತು:

66 ಅಪೀಲುದಾರರು ದಾವಾ ಅನುಸೂಚಿತ ಸ್ವತ್ತುಗಳ ಸ್ವಾಧೀನತೆಗೆ ಅರ್ಹರಾಗಿಲ್ಲವೆಂಬ ಅಧಿವಿಚಾರಣಾ ನ್ಯಾಯಾಲಯದ ನಿರ್ಣಯವು ದಾಖಲೆಯಲ್ಲಿನ ಸಾಕ್ಷ್ಯವನ್ನು ಆಧರಿಸಿದೆಯೇ?ಮತ್ತು ಅದೇ ರೀತಿ, ವಿಷಯದ

ಸ್ವತ್ತುಗಳನ್ನು ಸ್ವಾಧೀನಪಡಿಸಿಕೊಳ್ಳಲು ಕೋರಿರುವ ಅಪೀಲುದಾರರ ಹಕ್ಕುಗಳನ್ನು ಕಾಲಪರಿಮಿತಿ ಅಧಿನಿಯಮದ 27 ನೇ ಪ್ರಕರಣದ ಅಡಿಯಲ್ಲಿ ಸ್ಥಗಿತಗೊಂಡಿವೆ ಎಂದು ಅಪೀಲು ನ್ಯಾಯಾಲಯವು ನೀಡಿದ ನಿರ್ಣಯವು ದಾಖಲೆಯಲ್ಲಿನ ಸಾಕ್ಷ್ಯವನ್ನಾಧರಿಸಿದೆ ಮತ್ತು ಕಾನೂನಿನಲ್ಲಿ ಅದಕ್ಕೆ ಅನುಮತಿಯಿದೆಯೇ ??

ಆದಾಗ್ಯೂ, ಈ ಹಿಂದೆ ರೂಪಿಸಲಾದ ಕಾನೂನಿನ ಗಮನಾರ್ಹ ಪ್ರಶ್ನೆಯನ್ನು ದಿನಾಂಕ 04-12-2020 ರ ಆದೇಶದ ಮೇರೆಗೆ ಮಾರ್ಪಾಟು ಮಾಡಿ ಅದನ್ನು ಈ ಮುಂದಿನಂತೆ ಮರುರೂಪಿಸಲಾಯಿತು:

(  i) ದಾವಾ ಸ್ವತ್ತುಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ಕೋರುವ ದೂರುದಾರ (ಅಪೀಲುದಾರರು) ಹಕ್ಕುಗಳು, ಕಾಲ ಪರಿಮಿತಿ ಅಧಿನಿಯಮ, 1963 ರ ಅಡಿಯಲ್ಲಿ ಸ್ಥಗಿತಗೊಂಡಿವೆ ಎಂಬುದಾಗಿ ಮೊದಲನೇ ಅಪೀಲು ನ್ಯಾಯಾಲಯವು ನೀಡಿದ ನಿರ್ಣಯವು ಕರ್ನಾಟಕ ತೀರ್ಪುಗಳ ವರದಿ 2021

ದಾಖಲೆಯಲ್ಲಿನ ಸಾಕ್ಷ್ಯವನ್ನಾಧರಿಸಿದೆಯೇ, ಮತ್ತು ಅದನ್ನು ಸಮರ್ಥಿಸಬೇಕಾಗಿದೆಯೇ?

(ii) ದೂರುದಾರರು ಸ್ವತ್ತಿನ ಸ್ವಾಮ್ಯವನ್ನು ಹೊಂದಿರಲಿಲ್ಲ ತದನುಸಾರವಾಗಿ, ಸ್ವಾಧೀನವನ್ನು ವಾಪಸ್ಸು ಪಡೆಯುವುದಕ್ಕೆ ಕಾಲ ಪರಿಮಿತಿ ಅಧಿನಿಯಮದ 65 ನೇ ಅನುಚ್ಛೇದದ ಹಿನ್ನಲೆಯಲ್ಲಿ ಸ್ವಾಮ್ಯ ಘೋಷಣೆಗಾಗಿ ಕೋರದೆ ಸಮರ್ಥಿಸಲಾಗಿರಲಿಲ್ಲ ಎಂಬ ಅಧಿವಿಚಾರಣಾ ನ್ಯಾಯಾಲಯದ ಮತ್ತು ಪ್ರಥಮ ಅಧಿವಿಚಾರಣಾ ನ್ಯಾಯಾಲಯದ ಸಮವರ್ತಿ ನಿರ್ಣಯಗಳು ಸಂಬಂಧಿಸಿದ ದಾಖಲೆಯಲ್ಲಿನ ಸಾಕ್ಷ್ಯವನ್ನು ಮತ್ತು ಮನವಿಗಳ ಮತ್ತು ದೂರುದಾರರು ತೋರಿಸಿರುವಂಥ ಸ್ವತ್ತಿನ ಮೇಲಿನ ಹಕ್ಕುಗಳ ಹಿನ್ನಲೆಯಲ್ಲಿ ಅದನ್ನು ಸ್ಥಿರೀಕರಿಸಲು ಅಕ್ಷೇಪಿಸುತ್ತದೆಯೇ?

(iii) ಓ.ಎಸ್.ಸಂಖ್ಯೆ: 237/1989 ರ ಎದುರುದಾರರಾಗಿರುವ ದೂರುದಾರರು ಸ್ವಾಧೀನಕ್ಕೆ ಸಂಬಂಧಿಸಿದಂತೆ ಪ್ರತಿ ಕ್ಲೇಮನ್ನು ದಾಖಲಿಸಲು ವಿಫಲವಾಗಿರುವಷ್ಟರಮಟ್ಟಿಗೆ ದಾವೆಯು ಭಾವಿತ ಪೂರ್ವ ನ್ಯಾಯ ನಿರ್ಣಯದಿಂದ ಬಾಧಿತವಾಗಿದೆ ಎಂಬ 5 ನೇ ವಿವಾದಾಂಶದ ಬಗ್ಗೆ ಅಧಿವಿಚಾರಣಾ ನ್ಯಾಯಾಲಯವು ನೀಡಿದ ಸಮರ್ಥಿತ ನಿರ್ಣಯವು ದಾಖಲೆಯಲ್ಲಿನ ಮನವಿಗಳು ಮತ್ತು ಸಾಕ್ಷ್ಯದ ಹಿನ್ನಲೆಯಲ್ಲಿ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 2 ನೇ ನಿಯಮದ ಕ್ರಮಾದೇಶ-II ರ ಮೇರೆಗೆ, ಪ್ರಸ್ತುತ ದಾವೆಯನ್ನು ಹೂಡಲು ನಿರ್ಬಂಧಕವಾಗಿತ್ತೆ?

4. ಅಪೀಲುದಾರರ-ವಾದಿಗಳ ವಾದಾಂಶಗಳು.

( 6) ಆರ್.ಎಸ್.ಎ. ಸಂಖ್ಯೆ .1034/2005 ನ್ನು ವಜಾಗೊಳಿಸಿದ ಮೂರು ವರ್ಷಗಳ ಒಳಗಾಗಿ, ದಾವೆಯನ್ನು ದಾಖಲಿಸಲಾಗಿರುವುದರಿಂದ ಅದನ್ನು ಸಕಾಲದಲ್ಲಿ ಸಲ್ಲಿಸಲಾಗಿದೆ ಎಂದು, ದೂರುದಾರರ ಪರ ಹಾಜರಾದ ಮಾನ್ಯ ಶ್ರೀಮತಿ ನೂರ್ ಅಫ್ತಾಬ್ ಪರ್ವಿನ್ ಹಾಗೂ ಇತರರು -ವಿರುದ್ಧ ಶ್ರೀ ಹೆಚ್.ಎನ್. ಚಂದ್ರಶೇಖರ್ (ಮೃತ) ರವರ ಕಾನೂನು ವಾರಸುದಾರರು ಹಾಗೂ ಇತರರು 1533

ಶ್ರೀ ಎಂ.ವಿ. ಹಿರೇಮಠರವರು ವಾದಿಸಿದ್ದಾರೆ.ಕಾಲ ಪರಿಮಿತಿ ಅಧಿನಿಯಮ, 1963 ರ 113 ನೇ ಅನುಚ್ಛೇದದ ಮೇರೆಗೆ, ಎದುರುದಾರರ ಸ್ವಾಧೀನವನ್ನು ಅನಧಿಕೃತವಾಗಿದೆಯೆಂದು ಒಮ್ಮೆ ಅಭಿಪ್ರಾಯಪಟ್ಟಾಗ, ನಿಜವಾದ ಮಾಲೀಕರು, ಅದು ಕಾಲ ಪರಿಮಿತಿ ಅವಧಿಯ ಒಳಗಾಗಿ ಇರುವವರೆಗೂ ಅವರ ಸ್ವಾಮ್ಯಕ್ಕೆ ಸಂಬಂಧಿಸಿದಂತೆ ಘೋಷಣೆಯನ್ನು ಕೋರದೇ ದಾವೆಯನ್ನು ಹೂಡಬಹುದು.ರೇವಣ್ಣಸಿದ್ದಯ್ಯ ವಿರುದ್ಧ-ಗಂಗಮ್ಮ ಅಲಿಯಾಸ್ ಶಶಿಕಲಾ ಮತ್ತು ಮತ್ತೊಬ್ಬರು ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಮೇಲೆ ಅವಲಂಬಿಸಲಾಗಿದೆ.

(ii) ನರಸಹಳ್ಳಿ ಕೆಂಪಣ್ಣ ವಿರುದ್ಧ ನರಸಪ್ಪ ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಆಧರಿಸುವ ಮೂಲಕ, ವಿವಿಧ ವ್ಯಾಜ್ಯ ಕಾರಣದ ಮೇಲೆ ಪಕ್ಷಕಾರರ ನಡುವಿನ ಎರಡನೇ ದಾವೆಯು ಸಮರ್ಥನೀಯವಾಗಿದೆ ಎಂದು ವಾದಿಸಲಾಗಿದೆ.

(iii) ಅಲ್ಲದೆ, ಆರ್.ಎಸ್.ಎ. ಸಂಖ್ಯೆ.1034/2005 ರಲ್ಲಿನ ತೀರ್ಪಿನಲ್ಲಿ ಅಂತ್ಯಗೊಂಡು, ಓ.ಎಸ್.ಸಂಖ್ಯೆ.237/1989 ರಲ್ಲಿನ (ಪ್ರಾರಂಭದಲ್ಲಿ ನಿರ್ದಿಷ್ಟ ಪಾಲನೆಯ ಪರಿಹಾರವನ್ನು ಕೋರಿ ಸಲ್ಲಿಸಿದ್ದ ಮತ್ತು ತರುವಾಯ, ಪ್ರತಿಕೂಲ ಸ್ವಾಧೀನಕ್ಕೆ ಸಂಬಂಧಿಸಿದಂತೆ ಮಾತ್ರ ಕ್ಲೇಮು ಮಾಡಲಾದ ಪರಿಹಾರವನ್ನು ನಿರ್ಬಂಧಿಸಿದ್ದ) ದಾವೆಯನ್ನು ವಜಾಗೊಳಿಸಿದ ತರುವಾಯ ಸ್ವತ್ತು ವರ್ಗಾವಣೆ ಅಧಿನಿಯಮ, 1882 ರ 53 ಎ ಪ್ರಕರಣದ ಅಡಿಯಲ್ಲಿ ಸ್ವಾಧೀನವನ್ನು ರಕ್ಷಿಸಬಹುದೆಂದು ಈಗ ವಾದಿಸಲು ಸಾಧ್ಯವಾಗುವುದಿಲ್ಲ ಎಂದು ನಿವೇದಿಸಲಾಗಿದೆ.

5. ಪ್ರತ್ಯರ್ಜಿದಾರರ-ಪ್ರತಿವಾದಿಗಳ ವಾದಾಂಶಗಳು:

( 6) ಇದಕ್ಕೆ ಪ್ರತಿಯಾಗಿ, ಎದುರುದಾರರ ಪರ ಹಾಜರಾದ ಹಾಜರಾದ ಮಾನ್ಯ ಶ್ರೀ ಜಿ. ಬಾಲಕೃಷ್ಣ ಶಾಸ್ತ್ರಿ, ವಕೀಲರು ಇವರು, ವಾಸ್ತವ ಸಂಗತಿಯ ಸಮವರ್ತಿ

1. ಎಐಆರ್ 2017 ಎಸ್ಸಿ 5682

2. ಎಐಆರ್ 1989 ಕರ್ನಾಟಕ 50

ನಿರ್ಣಯಗಳ ಹಿನ್ನಲೆಯಲ್ಲಿ, ಕಾನೂನಿನ ಬಗ್ಗೆ ಯಾವುದೇ ಗಮನಾರ್ಹ ಪ್ರಶ್ನೆ ೧ ಉದ್ಭವಿಸುವುದಿಲ್ಲವೆಂದು ಮತ್ತು ಅದರ ಪ್ರಕಾರ ವಾಸ್ತವಾಂಶಗಳ ಸಮವರ್ತಿ ನಿರ್ಣಯಗಳ ಮಧ್ಯೆ ಹಸ್ತಕ್ಷೇಪ ಮಾಡಲಾಗುವುದಿಲ್ಲವೆಂದು ವಾದಿಸಿದ್ದಾರೆ.

(ii) ದೂರುದಾರರು, ದಾವಾ ಸ್ವತ್ತಿಗೆ ಸ್ವಾಮ್ಯವನ್ನು ಸಾಬೀತುಪಡಿಸಿಲ್ಲ ಮತ್ತು ಕೇವಲ ಆದಾಯದ ನಮೂದನ್ನು ಮಾತ್ರ ಅವಲಂಬಿಸಿದ್ದಾರೆಂದು ಮತ್ತು ಸ್ವಾಮ್ಯದ ಸಂಬಂಧದಲ್ಲಿ ಯಾವುದೇ ಘೋಷಣೆಯಿಲ್ಲದೆ ಸ್ವಾಧೀನವನ್ನು ಪಡೆಯಲು ಬರಿಯ ದಾವೆಯನ್ನು ಹೂಡಿರುವುದು ಸಮರ್ಥನೀಯವಾಗಿಲ್ಲ ಎಂದು ನಿವೇದಿಸಲಾಗಿದೆ.ಮೊದಲನೇ ಅಪೀಲು ನ್ಯಾಯಾಲಯವು ಕಾಲಮಿತಿಯ ಮೂಲಕ ದಾವೆಯನ್ನು ಸರಿಯಾಗಿಯೇ ತಡೆಯಿಡಿದಿದೆ ಮತ್ತು ಒಪ್ಪಂದ ರದ್ದುಪಡಿಸಿದಾಗ ದಿನಾಂಕ 01.01.1971 ರ ತರುವಾಯ ಕೂಡಲೇ ಸ್ವಾಧೀನಕ್ಕೆ ಸಂಬಂಧಿಸಿದ ದಾವೆಯನ್ನು ಸಲ್ಲಿಸಬೇಕಾಗಿತ್ತು ಎಂದು ವಾದಿಸಲಾಗಿದೆ.ಮುಂದುವರೆಸುತ್ತಾ, ಆರ್.ಎ.ಸಂಖ್ಯೆ 50/1991 ಮತ್ತು ಆರ್.ಎಸ್.ಎ. ಸಂಖ್ಯೆ .1034/2005 ಅನ್ನು ವಿಲೇ ಮಾಡುವಾಗ, ಶ್ರೀಮತಿ ತೈರುನ್ನಿಸಾ ದಾವೆಯನ್ನು ಸಲ್ಲಿಸುವ ಮೂಲಕ ಸ್ವಾಧೀನಕ್ಕೆ ಪಡೆದುಕೊಳ್ಳಬಹುದಿತ್ತೆಂದು ನೀಡಿರುವ ಅಭಿಪ್ರಾಯವನ್ನು ಅಂಥ ವ್ಯವಹರಣೆಗಳಿಗೆ ಕಾನೂನು ಅನುಮತಿ ನೀಡಿದರೆ, ದಾವೆಯನ್ನು ಹೂಡಲು ಅವಕಾಶ ಕಲ್ಪಿಸಲಾಗಿದೆಯೆಂದು ಅರ್ಥೈಸಿಕೊಳ್ಳಬೇಕಾಗುತ್ತದೆಂದು ವಾದಿಸಲಾಗಿದೆ.ಪ್ರಸ್ತುತ ಮೊಕದ್ದಮೆಯಲ್ಲಿ, ಕಾಲ ಪರಿಮಿತಿಯು ಒಮ್ಮೆ ಚಾಲ್ತಿಗೆ ಬಂದಿದ್ದರೆ ಅದನ್ನು ಅಡ್ಡಿಪಡಿಸಲು ಸಾಧ್ಯವಿಲ್ಲ ಮತ್ತು ತದನುಸಾರವಾಗಿ, 01.01.1971 ರ ತರುವಾಯ ಕಾನೂನು ಬದ್ಧವಾಗಿ ಅನುಮತಿಸಬಹುದಾದ ಸಮಯದೊಳಗೆ ಸಲ್ಲಿಸಬೇಕಾಗಿದ್ದು, ಪ್ರಸ್ತುತ ದಾವೆಯನ್ನು 2006 ರಲ್ಲಿ ಹೂಡಿದಾಗ, ಅದನ್ನು ತಡೆಹಿಡಿಯಲಾಯಿತು ಎಂದು ನಿವೇದಿಸಲಾಗಿದೆ.

(iii) ವಾದಿಯು ದಿನಾ ದಿನಾಂಕ ೦ ಕ 29.08.1968 ರಂದು ಸ್ವಾಧೀನವನ್ನು ಕಳೆದುಕೊಂಡಿರುವುದರಿಂದ 2006 ರಲ್ಲಿ ಸಲ್ಲಿಸಿದ ದಾವೆಯು, ಕಾಲ ಪರಿಮಿತಿ ಅಧಿನಿಯಮದ 64 ನೇ ಅನುಚ್ಛೇದದ ಅಡಿಯಲ್ಲಿ ಸಮರ್ಥನೀಯವಾಗಿರಲಿಲ್ಲ.



ಇದರ ಪರಿಣಾಮವಾಗಿ, ಕಾಲ ಪರಿಮಿತಿ ಅಧಿನಿಯಮದ 27 ನೇ ಪ್ರಕರಣದ ಮೇರೆಗೆ ಆ ಹಕ್ಕು ಸ್ಥಗಿತಗೊಂಡಿದೆ ಎಂದು ಪರ್ಯಾಯವಾಗಿ ವಾದಿಸಲಾಗಿದೆ.ಪ್ರತಿವಾದಿಯು, ಪ್ರತಿಕೂಲ ಸ್ವಾಧೀನದ ಮೂಲಕ ತನ್ನ ಸ್ವಾಮ್ಯವನ್ನು ಪರಿಪೂರ್ಣಗೊಳಿಸಿದ್ದನೆಂಬ ಅಧಿವಿಚಾರಣಾ ನ್ಯಾಯಾಲಯದ ನಿರ್ಣಯವನ್ನು ರದ್ದುಪಡಿಸಿ ಪ್ರಥಮ ಅಪೀಲು ನ್ಯಾಯಾಲಯವು ನೀಡಿದ ನಿರ್ಣಯವು ತಪ್ಪಾಗಿತ್ತು ಮತ್ತು ಪ್ರಸ್ತುತ ಅಪೀಲಿನಲ್ಲಿ ಎದುರುದಾರರು ಸಿವಿಲ್ ಪ್ರಕ್ರಿಯಾ ಸಂಹಿತೆಯ 22 ( 1) ನೇ ನಿಯಮದ 41 ನೇ ಕ್ರಮಾದೇಶದ ಬಲದಿಂದ ಅಂಥ ನಿರ್ಣಯವನ್ನು ಪ್ರಶ್ನಿಸಲು ಅರ್ಹರಾಗಿದ್ದರೆಂದು ವಾದಿಸಲಾಗಿದೆ.

(iv) ಪ್ರತಿಕೂಲ ಸ್ವಾಧೀನದ ಮೂಲಕ ಸ್ವಾಮ್ಯವನ್ನು ಪರಿಪೂರ್ಣವಾಗಿ ಹೊಂದಿರುವುದಕ್ಕೆ ಸಂಬಂಧಿಸಿದ ಶ್ರೀ ಹೆಚ್.ಸಿ. ನಾಗಪ್ಪರವರ ಕ್ಲೇಮು, ದಿನಾಂಕ 01.01.1971 ರಿಂದ ಪ್ರಾರಂಭವಾಗಲಿರುವುದರಿಂದ, ಶ್ರೀ ಹೆಚ್.ಸಿ. ನಾಗಪ್ಪರವರ ಹೆಸರು ಆದಾಯ ದಾಖಲೆಗಳಲ್ಲಿ ನಿರಂತರವಾಗಿ ನಮೂದಾಗಿರುವುದು ಕಂಡುಬಂದಿರುವುದರಿಂದ, ಮತ್ತು ಶ್ರೀ ಹೆಚ್.ಸಿ. ನಾಗಪ್ಪ ರವರು ಈ ಬಗ್ಗೆ ಆಕ್ಷೇಪವನ್ನು ಎತ್ತಿ, ಓ.ಎಸ್.ಸಂಖ್ಯೆ.53/1972 ರಲ್ಲಿ ಲಿಖಿತ ಹೇಳಿಕೆಯನ್ನು ದಾಖಲಿಸುವ ಮೂಲಕ ಶ್ರೀಮತಿ ತೈರುನ್ನಿಸಾರವರ ಹಕ್ಕುಗಳನ್ನು ನಿರಾಕರಿಸಿರುವಾಗ ಪ್ರತಿಕೂಲ ಸ್ವಾಧೀನದ ಕ್ಲೇಮು ಮೇಲೆ ಉಲ್ಲೇಖಿಸಿದಂತಹ ಸಮಯದಿಂದ ಪ್ರಾರಂಭವಾಗಿದ್ದು, 2006 ರಲ್ಲಿ ತುಂಬಾ ತಡವಾಗಿ ಪ್ರಸ್ತುತ ಅರ್ಜಿ ಸಲ್ಲಿಸಿದ್ದು, ಅದು ಕಾನೂನಿನ ಪ್ರಕಾರ ಪ್ರತಿಬಂಧಕವಾಗಿದೆಯೆಂದು ಸಹ ವಾದಿಸಲಾಗಿದೆ.

6. ಪರಿಗಣನೆ:

I.ಕಾನೂನಿನ ಗಮನಾರ್ಹ ಪ್ರಶ್ನೆ ಸಂಖ್ಯೆ.1

66 " ದಾವಾ ಸ್ವತ್ತುಗಳ ಸ್ವಾಧೀನವನ್ನು ಪಡೆಯುವ ದೂರುದಾರರ (ಅಪೀಲುದಾರ) ಹಕ್ಕು ಕಾಲಪರಿಮಿತಿ ಅಧಿನಿಯಮ, 1963 ರ 27 ನೇ ಪ್ರಕರಣದ ಅಡಿಯಲ್ಲಿ ಸ್ಥಗಿತಗೊಂಡಿದೆ ಎಂಬ ಪ್ರಥಮ ಕರ್ನಾಟಕ ತೀರ್ಪುಗಳ ವರದಿ 2021

ಅಪೀಲು ನ್ಯಾಯಾಲಯದ ನಿರ್ಣಯವು ದಾಖಲೆಯಲ್ಲಿನ ಸಾಕ್ಷ್ಯವನ್ನು ಆಧರಿಸಿದೆಯೇ ಮತ್ತು ಅದು ಸಮರ್ಥಿತವಾಗಿದೆಯೇ? "

( 1) ಓ.ಎಸ್.ಸಂಖ್ಯೆ:53/1972 ಅನ್ನು ಶಾಶ್ವತ ತಡೆಯಾಜ್ಞೆಗಾಗಿ ಸಲ್ಲಿಸಲಾಯಿತು ಮತ್ತು ಎದುರುದಾರರ ಸ್ವಾಧೀನವನ್ನು ಸ್ಥಿರೀಕರಿಸಿ ವಜಾಗೊಳಿಸಲಾಯಿತು ಎಂಬ ಸಂಗತಿಯು ವಿವಾದದಲ್ಲಿರಲಿಲ್ಲ.ಇಲ್ಲವೇ ಶ್ರೀಮತಿ ತೈರುನ್ನಿಸಾ ದಿನಾಂಕ 01.01.1971 ರಂದು ಒಪ್ಪಂದವನ್ನು ರದ್ದುಗೊಳಿಸಿದ್ದರು ಎಂಬುದನ್ನು ನಿರಾಕರಿಸಿಲ್ಲ.ಸ್ವಾಧೀನಕ್ಕಾಗಿ ದಾವೆಯನ್ನು ಹೂಡುವ ಹಕ್ಕು ದಿನಾಂಕ 01.01.1971 ರಂದು ಮತ್ತು ನಂತರ ಶ್ರೀಮತಿ ತೈರುನ್ನಿಸಾರವರು ತಡೆಯಾಜ್ಞೆಯ ಪರಿಹಾರವನ್ನು ಕೋರಿ ಸಲ್ಲಿಸಿದ್ದರು, ಓ.ಎಸ್.ಸಂಖ್ಯೆ: 53/1972 ನ್ನು ವಜಾಗೊಳಿಸಿದ ದಿನಾಂಕದಂದು ಇದ್ದಂತೆ ಪ್ರಾಪ್ತವಾಗಿದೆಯೆಂದು ವಾದಿಸಲಾಗಿದ್ದರೂ, ಓ.ಎಸ್.ಸಂಖ್ಯೆ:53/1972 ರನ್ನು ವಜಾಗೊಳಿಸಿದ ತರುವಾಯ, ಎದುರುದಾರರು, ಮಾರಾಟ ಮಾಡುವ ಒಪ್ಪಂದದ ನಿರ್ದಿಷ್ಟ ಪಾಲನೆಗಾಗಿ ಓ.ಎಸ್.ಸಂಖ್ಯೆ:237/1989 ರಲ್ಲಿ ದಾವೆಯನ್ನು ಸಲ್ಲಿಸಬೇಕಾಗಿ ಬಂದಿತೆಂಬ ಸಂಗತಿಯನ್ನು ಗಮನಿಸದಿರಲಾಗುವುದಿಲ್ಲ.ಈ ದಾವೆಯನ್ನು ಅಂತಿಮವಾಗಿ ವಜಾಗೊಳಿಸಿ ಆರ್.ಎ.ಸಂಖ್ಯೆ:50/1991 ರಲ್ಲಿನ ಅಪೀಲಿನಲ್ಲಿ ಕೈಗೆತ್ತಿಕೊಳ್ಳಲಾಯಿತು.ಇದನ್ನು ಸಹ ದಿನಾಂಕ 17.01.2005

ರಂದು ವಜಾಗೊಳಿಸಿ ಆರ್.ಎಸ್.ಎ.ಸಂಖ್ಯೆ: 1034/2005 ರಲ್ಲಿ ವಿಚಾರಣೆ ಮಾಡಿ ಕೆಲವು ಅಭಿಪ್ರಾಯಗಳೊಂದಿಗೆ ದಿನಾಂಕ 12.12.2005 ರಂದು ವಿಲೆ ಮಾಡಲಾಯಿತು.

(ii) ಆರ್.ಎಸ್.ಎ.ಸಂಖ್ಯೆ: 1034/2005 ನ್ನು ವಿಲೆ ಮಾಡುವಾಗ, ನ್ಯಾಯಾಲಯವು, ಖರೀದಿದಾರರಾಗಿರುವ ಎದುರುದಾರರು ಸ್ವಾಧೀನವನ್ನು ಒಪ್ಪಿಕೊಂಡಿದ್ದರೆಂಬ ಸಂಗತಿಯನ್ನು ಗಮನಿಸಿ ಒಬ್ಬ ವ್ಯಕ್ತಿಯು ಮಾರಾಟದ ಒಪ್ಪಂದಕ್ಕೆ ಅನುಗುಣವಾಗಿ ಸ್ವಾಧೀನವನ್ನು ಹೊಂದಿದಾಗ, ಪ್ರತಿಕೂಲ ಸ್ವಾಧೀನದ ಕೇಮನ್ನು ಪರಿಗಣಿಸಲು ಸಾಧ್ಯವಿಲ್ಲವೆಂದು ಅಭಿಪ್ರಾಯಪಟ್ಟಿದೆ.(ಆದಾಗ್ಯೂ, ಸ್ವಾಧೀನಪಡಿಸಿಕೊಳ್ಳುವುದಕ್ಕಾಗಿ ದೂರುದಾರರು ಸಲ್ಲಿಸುವ ದಾವೆಯಲ್ಲಿ ಎಲ್ಲಾ ವಾದಾಂಶಗಳನ್ನು ರಕ್ಷಣೆಯಾಗಿ ತೆಗೆದುಕೊಳ್ಳಬಹುದೆಂದು ಸ್ಪಷ್ಟಪಡಿಸಲಾಗಿದೆ).

ಶ್ರೀಮತಿ ನೂರ್ ಅಫ್ತಾಬ್ ಪರ್ವಿನ್ ಹಾಗೂ ಇತರರು -ವಿರುದ್ಧ ಶ್ರೀ ಹೆಚ್.ಎನ್. ಚಂದ್ರಶೇಖರ್ (ಮೃತ) ರವರ ಕಾನೂನು ವಾರಸುದಾರರು ಹಾಗೂ ಇತರರು 1537

ಈ ವಿಲಕ್ಷಣ ಸಂಗತಿಗಳ ಹಿನ್ನಲೆಯಲ್ಲಿ, ನಿರ್ದಿಷ್ಟ ಪಾಲನೆಯ ಪರಿಹಾರವನ್ನು ಕೈಬಿಟ್ಟು ಮತ್ತು ಪ್ರತಿಕೂಲ ಸ್ವಾಧೀನದ ಸಂಬಂಧದಲ್ಲಿ ಕ್ಲೇಮನ್ನು ನಿರ್ಬಂಧಿಸಿ ದಿನಾಂಕ 03.03.2000 ರಂದು ಇದರಲ್ಲಿನ ಮನೋವನ್ನು ಸಲ್ಲಿಸಲಾಯಿತು.03.03.2000 ತರುವಾಯದಿಂದ ಮಾತ್ರವೇ ಪ್ರತಿಕೂಲ ಸ್ವಾಧೀನದ ಕ್ಲೇಮನ್ನು ಎತ್ತಬಹುದೆಂದು ಅಭಿಪ್ರಾಯಪಡಲಾಯಿತು.

(ii) ಎದುರುದಾರರು, ದಾವಾ ಅನುಸೂಚಿತ ಸ್ವತ್ತಿನ ಸ್ವಾಧೀನತೆಯನ್ನು ಹೊಂದಿದ್ದರೂ, ಸ್ವಾಧೀನದ ದಾವೆಯನ್ನು ಸಲ್ಲಿಸುವ ಮೂಲಕ ಕಾನೂನಿಗನುಸಾರವಾಗಿ ಅವನ ಸ್ವಾಧೀನತೆಯನ್ನು ಹಿಂದಕ್ಕೆ ಪಡೆಯಬಹುದು, ಮತ್ತು ಅಂಥ ದಾವೆಯಲ್ಲಿ, ಎದುರುದಾರರಿಗೆ ಸಮುಚಿತ ವಾದದ ವಿಷಯವನ್ನು ಎತ್ತುವ ಅವಕಾಶ ಮುಕ್ತಾಯವಾಗಿತ್ತು ಎಂದು ನ್ಯಾಯಾಲಯವು ಅಭಿಪ್ರಾಯಪಟ್ಟಿತು.ಎರಡನೇ ಅಪೀಲನ್ನುದಿನಾಂಕ: 12.12.2005 ರಂದು ವಿಲೆ ಮಾಡಲಾಯಿತು ಮತ್ತು ಪ್ರಸ್ತುತ ದಾವೆಯನ್ನುದಿನಾಂಕ: 07.12.2006 ರಂದು ಸಲ್ಲಿಸಲಾಯಿತು.

ಈ ವಿಷಯವನ್ನು, ಪರಿಗಣನೆಗಾಗಿ ಈ ಮುಂದಿನ ಅಂಶಗಳ ಆಧಾರದ ಮೇಲೆ ರೂಪಿಸಲಾದ ಕಾನೂನಿನ ಸಂಖ್ಯೆ 1 ರ ಗಮನಾರ್ಹ ಪ್ರಶ್ನೆಯ ಹಿನ್ನಲೆಯಲ್ಲಿ ವ್ಯವಹರಿಸಬಹುದು.

( ಎ) ಎದುರುದಾರರು ಪ್ರತಿವಾದಿಸಿದಂತೆ ಪ್ರತಿಕೂಲ ಸ್ವಾಧೀನದ ಕೇಮಿನ ಪ್ರಾರಂಭದ ಅಂಶ.

( 6) ಪ್ರಸ್ತುತ ದಾವೆಯನ್ನು ಕಾಲ ಪರಿಮಿತಿಯ ಮೂಲಕ ನಿರ್ಬಂಧಿಸಲಾಗಿದೆಯೇ ಎಂಬುದಕ್ಕೆ ಸಂಬಂಧಿಸಿದ ಪ್ರಶ್ನೆಯನ್ನು ಪ್ರತಿವಾದಿಯು, 2006 ರಲ್ಲಿ ದೂರುದಾರರು ಸ್ವಾಧೀನವನ್ನು ಪಡೆದುಕೊಳ್ಳುವ ದಾವೆಯನ್ನು ಸಲ್ಲಿಸುವ ವೇಳೆಗೆ ಪ್ರತಿಕೂಲದ ಸ್ವಾಧೀನದ ಮೂಲಕ ತನ್ನ ಸ್ವಾಮ್ಯವನ್ನು ಪರಿಪೂರ್ಣಗೊಳಿಸಿದ್ದಾನೆಯೇ ಎಂಬ ಅಂಶದಿಂದ ಪರಿಶೀಲಿಸಬೇಕು.ಮೊದಲನೇ ಅಪೀಲು ನ್ಯಾಯಾಲಯವು ಸರಿಯಾಗಿಯೇ

ಅಭಿಪ್ರಾಯಪಟ್ಟಿರುವಂತೆ ಆರ್.ಎ.ಸಂಖ್ಯೆ 50/1991 ಮೆಮೋವನ್ನು ಸಲ್ಲಿಸಿದ್ದಾಗ ಎದುರುದಾರರು, ಪ್ರತಿಕೂಲ ಸ್ವಾಧೀನಕ್ಕೆ ಸಂಬಂಧಿಸಿದಂತೆ ಸಲ್ಲಿಸಿದ ಕ್ಲೇಮು, ದಿನಾಂಕ 03.03.2000 ರವರೆಗೆ ಪ್ರಾರಂಭವಾಗಿದೆಯೆಂದು ಹೇಳಲಾಗುವುದಿಲ್ಲ ಇದರಲ್ಲಿ, ಎದುರುದಾರರು, ನಿರ್ದಿಷ್ಟ ಪಾಲನೆಗಾಗಿ ಆತನ ಕ್ಲೇಮನ್ನು ನಿಸ್ಸಂದಿಗ್ಧವಾಗಿ ಬಿಟ್ಟುಕೊಟ್ಟಿದ್ದಾನೆ.

i) ಪ್ರತಿಕೂಲ ಸ್ವಾಧೀನದ ಕ್ಲೇಮು, ಸಮವರ್ತಿಯಾಗಿ ಮೂರು ಮಾನದಂಡಗಳನ್ನು ಈಡೇರಿಸುವುದು ಅಗತ್ಯ, ಅವು:

( ಎ) ನೆಕ್ ವಿ (nec vi)-ನಿರಂತರತೆಯಲ್ಲಿ ಪರ್ಯಾಪ್ತತೆ

(ಬಿ) ನೆಕ್ ಕಾಮ್ (nec clam)-ಪ್ರಚಾರದಲ್ಲಿ ಪರ್ಯಾಪ್ತತೆ

(ಸಿ) ನೆಕ್ ಪ್ರಿಕಾರಿಯೋ (nec precario)-ಸ್ವಾಮ್ಯದ ನಿರಾಕರಣೆಯಲ್ಲಿ ಪ್ರತಿಸ್ಪರ್ಧಿಸಿ ಮತ್ತು ಆತನ ವಿವೇಚನೆಗೆ ಪ್ರತಿಕೂಲತೆ.

ಆದ್ದರಿಂದ ಮೊದಲಿಗೆ, ಎದುರುದಾರರ ಪ್ರತಿಪಾದನೆಯನ್ನು, ನಿಜವಾದ ಮಾಲೀಕನ ಸ್ವಾಮ್ಯಕ್ಕೆ ಮತ್ತು ಆತನ ವಿವೇಚನೆಗೆ ಉದ್ದೇಶಿತ ಪ್ರತಿಕೂಲ ಅಗತ್ಯತೆಯೊಂದಿಗೆ ಸ್ವಾಧೀನವನ್ನು ಹೊಂದಲು ಪ್ರತಿಪಾದಿಸಬೇಕು.ಇದು ಹನ್ನೆರಡು ವರ್ಷಗಳ ಅಗತ್ಯ ಉದ್ದೇಶದೊಂದಿಗೆ ಮಾತ್ರ ಸ್ವಾಧೀನವಾಗಿದ್ದು, ಇದು ಪ್ರತಿಕೂಲ ಸ್ವಾಧೀನದ ಮೂಲಕ ಸ್ವಾಮ್ಯವನ್ನು ಕೊಡಲು ಅವಕಾಶಮಾಡಿಕೊಡುತ್ತದೆ.

(iii) ಪ್ರತಿಕೂಲ ಸ್ವಾಧೀನದ ಕ್ಲೇಮು, ದೂರುದಾರರ ಸ್ವಾಮ್ಯದ ಸ್ವೀಕಾರದೊಂದಿಗೆ ಸಮವರ್ತಿಯಾಗಿ ಮುಂದುವರೆಯಲು ಸಾಧ್ಯವಾಗುವುದಿಲ್ಲ.ಪ್ರಸ್ತುತ ಮೊಕದ್ದಮೆಯಲ್ಲಿ, ದೂರುದಾರರು, ಶ್ರೀಮತಿ ತೈರುನ್ನಿಸಾ ರವರು ದಿನಾಂಕ 29.08.1968 ರಂದು ಬರೆದುಕೊಟ್ಟು ಮಾರಾಟ ಮಾಡುವ ಒಪ್ಪಂದದ ಆಧಾರದ ಮೇಲೆ ಮಾತ್ರ

86 ಶ್ರೀಮತಿ ನೂರ್ ಅಫ್ತಾಬ್ ಪರ್ವಿನ್ ಹಾಗೂ ಇತರರು -ವಿರುದ್ಧ ಶ್ರೀ ಹೆಚ್.ಎನ್. ಚಂದ್ರಶೇಖರ್ (ಮೃತ) ರವರ ಕಾನೂನು ವಾರಸುದಾರರು ಹಾಗೂ ಇತರರು 1539

ಸ್ವಾಧೀನವನ್ನು ಪಡೆದುಕೊಂಡಿದ್ದರಿಂದ ಅವನು ವಾದಿಯ ಮಾಲೀಕತ್ವವನ್ನು ಸ್ವೀಕರಿಸಿದ್ದ ಎಂದು ಒಪ್ಪಿಕೊಂಡ ಸಂಗತಿಗಳಿಂದ ಹೊರಬಂದಿದೆ.

(iv) ಶ್ರೀ ಹೆಚ್.ಸಿ. ನಾಗಪ್ಪ, ಮಾರಾಟದ ಒಪ್ಪಂದದ ನಿರ್ದಿಷ್ಟ ಪಾಲನೆಗಾಗಿ ಕೋರಿ ಓ.ಎಸ್.ಸಂಖ್ಯೆ 237/1989 ರನ್ನು ಸಲ್ಲಿಸಿದಾಗ, ಕ್ಲೇಮು ಮಾಡಲಾದ ನಿರ್ದಿಷ್ಟ ಪಾಲನೆಯ ಪರಿಹಾರವನ್ನು ಆಧರಿಸಿ ದೂರುದಾರರ ಸ್ವಾಮ್ಯವನ್ನು ಸ್ಪಷ್ಟವಾಗಿ ಅಲ್ಲಗಳೆಯಲಾಗದೇ ನಿಸ್ಸಂದಿಗ್ಧವಾಗಿ ಅಂಗೀಕರಿಸಲಾಯಿತು.ನಿರ್ದಿಷ್ಟ ಪಾಲನೆಯ ಕ್ಲೇಮನ್ನು ದಿನಾಂಕ 03.03.2000 ರಂದು ಮೆನೋವನ್ನು ಸಲ್ಲಿಸುವ ಮೂಲಕ ಕೈಬಿಡಲಾಗಿದೆ ಎಂಬುದನ್ನು ನಿರ್ದಿಷ್ಟವಾಗಿ ಗಮನಿಸಬೇಕು.ಇತರ ಕಾನೂನು ಘಟಕಾಂಶಗಳು ಈಡೇರುವವರೆಗೂ, ಪ್ರತಿಕೂಲ ಸ್ವಾಧೀನದ ಕ್ಲೇಮು, ಅಂತಹ ದಿನಾಂಕದಂದು ಮಾತ್ರ ಪ್ರಾರಂಭವಾಗುವುದೆಂದು ಅರ್ಥೈಸಿಕೊಳ್ಳಬಹುದು.

( v) ಈ ಅಂಶಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಬೋರ್ಡ್ ಆಫ್ ವಕ್ಸ್ ವಿರುದ್ಧ ಭಾರತ ಸರ್ಕಾರ ಮತ್ತು ಇತರರು ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯ ನೀಡಿದ ತೀರ್ಪು ಮತ್ತಷ್ಟು ಬೆಳಕನ್ನು ಚೆಲ್ಲುತ್ತದೆ ಮತ್ತು ಈ ಮುಂದಿನ ಉತ್ಕೃತಭಾಗವನ್ನು ಗಮನಿಸಬೇಕಾಗಿದೆ.

“12. ಸ್ವಾಮ್ಯದ ದಾವೆಯನ್ನು ಸಲ್ಲಿಸುವ ದೂರುದಾರರು, ಸ್ವತ್ತಿನ ಮೇಲಿನ ಸ್ವಾಮ್ಯದ ಮೂಲದ ಕುರಿತು ಹೆಚ್ಚು ಸ್ಪಷ್ಟತೆ ಹೊಂದಿರಬೇಕು.ಆತನು ಅದನ್ನು ನಿರ್ದಿಷ್ಟವಾಗಿ ಒಪ್ಪಿಕೊಳ್ಳಬೇಕು.(ಎಸ್.ಎಂ.ಕರೀಮ್ -ವಿರುದ್ಧ ಬೀಬಿ ಸಕಿನಾ [ಎಐಆರ್ 1964 ಎಸ್ಸಿ 1254] ಮೊಕದ್ದಮೆಯನ್ನು ನೋಡಿ).ಪಿ. ಪೆರಿಯಸಾಮಿ-ವಿರುದ್ಧ ಪಿ. ಪೆರಿಯಥಂಬಿ [ (1995) 6 ಎಸ್ಸಿ 523] ಮೊಕದ್ದಮೆಗಳಲ್ಲಿ ಈ ನ್ಯಾಯಾಲಯವು ಈ ಮುಂದಿನಂತೆ ತೀರ್ಪು ನೀಡಿದೆ.(ಎಸ್ಸಿಸಿ ಪಿ. 527, ಪ್ಯಾರಾ 5)

3. (2004) 10 ಎಸ್ಸಿಸಿ 779 1540 ಕರ್ನಾಟಕ ತೀರ್ಪುಗಳ ವರದಿ 2021

“ ಪ್ರತಿಕೂಲ ಸ್ವಾಧೀನದ ಮನವಿಯನ್ನು ಮಾಡಿಕೊಂಡಾಗಲೆಲ್ಲ, ಬೇರೊಬ್ಬರು ಸ್ವತ್ತಿನ ಮಾಲೀಕರಾಗಿದ್ದರೆಂಬುದು ಮನವಿಯಲ್ಲಿ ಅಂತರ್ನಿಹಿತವಾಗಿರುವುದು ಕಂಡುಬರುತ್ತದೆ.”

ಸ್ವಾಮ್ಯದ ಮತ್ತು ಪ್ರತಿಕೂಲ ಸ್ವಾಧೀನದ ಮೇಲಿನ ಮನವಿಗಳು ಪರಸ್ಪರ ಹೊಂದಾಣಿಕೆಯಾಗುವುದಿಲ್ಲ ಮತ್ತು ಪ್ರತಿಕೂಲ ಸ್ವಾಧೀನತೆಯನ್ನು ಬಿಟ್ಟುಬಿಡುವವರೆಗೂ ಸ್ವಾಮ್ಯವನ್ನು ಕಾರ್ಯಗತಗೊಳಿಸಲು ಪ್ರಾರಂಭಿಸಲಾಗುವುದಿಲ್ಲ.ಪ್ರಸ್ತುತ ಮೊಕದ್ದಮೆಯನ್ನು ಹೋಲುವ ಮೋಹನ್ ಲಾಲ್ -ವಿರುದ್ಧ-ಮಿರ್ಜಾ ಅಬ್ದುಲ್ ಗಫಾರ್ ಮೊಕದ್ದಮೆಯನ್ನು ವ್ಯವಹರಿಸುವಾಗ, ಈ ನ್ಯಾಯಾಲಯವು ಈ ಮುಂದಿನಂತೆ ತೀರ್ಪು ನೀಡಿದೆ:(ಎಸ್ಸಿ ಪಿಪಿ.640-41, ಪ್ಯಾರಾ -4)

“4. ಮೊದಲನೇ ಮನವಿಗೆ ಸಂಬಂಧಿಸಿದಂತೆ ಇದು ಎರಡನೇ ಮನವಿಯೊಂದಿಗೆ ಅಸ ಂ ಗತವಾಗಿದೆ.ಒಪ್ಪಂದದ ಮೇರೆಗೆ ಸ್ವಾಧೀನಪಡಿಸಿಕೊಂಡ ನಂತರ, ಆತನು ಅದರಡಿಯಲ್ಲಿ ತನ್ನ ಹಕ್ಕನ್ನು ನಿರಾಕರಿಸಬೇಕು ಮತ್ತು ವರ್ಗಾವಣೆದಾರ ಅಥವಾ ಆತನ ಉತ್ತರಾಧಿಕಾರಿಯ ವಿವೇಚನೆಗೆ ಹಕ್ಕಿನಲ್ಲಿ ಅಥವಾ ಅದರ ಹಿತಾಸಕ್ತಿಯಲ್ಲಿ ಪ್ರತಿಕೂಲ ಸ್ವಾಧೀನದ ಪ್ರತಿಪಾದನೆಯನ್ನು ಸಮರ್ಥಿಸಿ ಸಾಬೀತುಪಡಿಸಬೇಕು, ಮತ್ತು ಆತನ

ಉತ್ತರಾಧಿಕಾರಿಯು 12 ವರ್ಷಗಳ ಸಂಪೂರ್ಣ ಕಾಲಾವಧಿಯಲ್ಲಿ ಎಂದರೆ, ನೆಕ್ ವಿ, ನೆಕ್ ಕಾಮ್, ನೆಕ್ ಪ್ರಕಾರಿಯೋ ನಿಯಮದ ಮೂಲಕ ಆತನ ಹಕ್ಕಿನ ಅವಧಿ ಪೂರ್ಣವಾಗುವವರೆಗೆ ಆತನ ಕಾನೂನು ಬಾಹಿರ ಸ್ವಾಧೀನಕ್ಕೆ ಒಪ್ಪಿಕೊಂಡಿದ್ದ.ಅಪೀಲುದಾರರ ಕ್ಲೇಮು 53- ಎ ಪ್ರಕರಣವನ್ನು ಆಧರಿಸಿರುವುದರಿಂದ, ಒಪ್ಪಂದದ ಅಡಿಯಲ್ಲಿ ಆತನು ಕಾನೂನುಬದ್ಧವಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದು ಅದು ದಾವೆಯ ದಿನಾಂಕದವರೆಗೂ ಆತನ ಸ್ವಾಧೀನದಲ್ಲಿ ಉಳಿದಿರುವುದು



ಮುಂದುವರೆದಿದೆ ಎಂದು ಸೂಚಿಸುವ ಮೂಲಕ ಒಪ್ಪಿಕೊಳ್ಳುತ್ತಾನೆಂದು ಹೇಳದೆ ಹೋಗುತ್ತದೆ.ಆ ಮೂಲಕ, ಪ್ರತಿಕೂಲ ಸ್ವಾಧೀನದ ಮನವಿಯು, ಅಪೀಲುದಾರರಿಗೆ ಲಭ್ಯವಾಗಿರುವುದಿಲ್ಲ.25 (ಒತ್ತು ನೀಡಲಾಗಿದೆ)

(vi) ವಿಧಿಸಲಾದ ಕಾನೂನಿನ ಹಿನ್ನೆಲೆಯಲ್ಲಿ, ಕಾನೂನಿನಲ್ಲಿ ಹೇಳಲಾದ ಅ ಂ ಶಗಳಿಗೆ ಸ ಂ ಬ ಂ ಧಿಸಿದ ಂ ತೆ ಇನ್ನೂ ಸಾಬೀತುಗೊಳಿಸಬೇಕಾಗಿರುವ ಪ್ರತಿಕೂಲ ಸ್ವಾಧೀನದ ಅವಧಿಯನ್ನು, ಎದುರುದಾರರು ದೂರುದಾರರ ಸ್ವಾಮ್ಯವನ್ನು ನಿರ್ದಿಷ್ಟವಾಗಿ ನಿರಾಕರಿಸುವಾಗ ಅವನ ಸ್ವಾಮ್ಯದಡಿಯಲ್ಲಿ ಕ್ಲೇಮು ಮಾಡುವುದನ್ನು ನಿಲ್ಲಿಸಿದಾಗ ಮತ್ತು ಪ್ರತಿಕೂಲ ಸ್ವಾಧೀನದ ಮನವಿಯನ್ನು ಪ್ರತಿವಾದಿಸಿದಾಗ ಮಾತ್ರ ದಿನಾಂಕ 03.03.2000 ದಿಂದ ಪ್ರಾರಂಭಿಸಲಾಗಿದೆಯೆಂದು ಪರಿಗಣಿಸಬಹುದು.ಪ್ರಾಸಂಗಿಕವಾಗಿ, ದಾವೆಯನ್ನು 2006 ರಲ್ಲಿ ದಾಖಲಿಸಿರುವುದರಿಂದ, ಪ್ರತಿಕೂಲ ಸ್ವಾಧೀನದ ಅಂಶಗಳನ್ನು ಸಾಬೀತುಪಡಿಸಲಾಗಿದ್ದರೂ, ಪ್ರಾರಂಭದ ಅಂಶವನ್ನು ದಿನಾಂಕ 03-03-2000 ಎಂದು ತೆಗೆದುಕೊಂಡರೆ, 12 ವರ್ಷಗಳ ಅವಧಿ ಇನ್ನೂ ಪೂರ್ಣಗೊಂಡಿರಲಿಲ್ಲ.

ಬಿ) ಸ್ವಾಧೀನವನ್ನು ವಾಪಸ್ಸು ಪಡೆದುಕೊಳ್ಳಲು ದಾವೆ ಹೂಡುವ ದೂರುದಾರರ ಹಕ್ಕು ಕಾಲ ಪರಿಮಿತಿ ಅಧಿನಿಯಮ, 1963 ರ 27 ನೇ ಪ್ರಕರಣದ ಬಲದಿಂದ ಸ್ಥಗಿತಗೊಂಡಿದೆಯೇ:

( i) ಕಾಲ ಪರಿಮಿತಿ ಅಧಿನಿಯಮ, 1963 ರ 27 ನೇ ಪ್ರಕರಣವನ್ನು ಈ ಮುಂದಿನಂತೆ ಓದಲಾಗಿದೆ:



“27. ಸ್ವತ್ತಿನ ಹಕ್ಕನ್ನು ಅಂತ್ಯಗೊಳಿಸುವುದು.

ಯಾವುದೇ ಸ್ವತ್ತಿನ ಸ್ವಾಧೀನಕ್ಕೆ ದಾವೆಯನ್ನು ಹೂಡುವ ಯಾರೇ ವ್ಯಕ್ತಿಗೆ ಈ ಮೂಲಕ ಪರಿಮಿತಿಗೊಳಿಸಲಾದ ಅವಧಿಯನ್ನು ನಿರ್ಧರಿಸುವಲ್ಲಿ, ಅಂತಹ ಸ್ವತ್ತಿನ ಸಂಬಂಧದಲ್ಲಿ ಆತನ ಹಕ್ಕನ್ನು ಅಂತ್ಯಗೊಳಿಸತಕ್ಕದ್ದು. "

ಪ್ರಸ್ತುತ ಮೊಕದ್ದಮೆಯಲ್ಲಿ, ಮಾರಾಟದ ಒಪ್ಪಂದವನ್ನು ಶ್ರೀಮತಿ ತೈರುನ್ನಿಸಾ ರವರು ಹಿಂತೆಗೆದುಕೊಂಡ ದಿನಾಂಕ 01.01.1971 ರಂದು ಅಥವಾ ಎದುರುದಾರರು, ಕಾಯಂ ತಡೆಯಾಜ್ಞೆಯ ಪರಿಹಾರವನ್ನು ಕೋರಿ ಓ.ಎಸ್.ಸಂಖ್ಯೆ 53/1972 ರಲ್ಲಿ ಲಿಖಿತ ಹೇಳಿಕೆಯನ್ನು ಸಲ್ಲಿಸಿದ, ಅಥವಾ ಸಿವಿಲ್ ಪ್ರಕ್ರಿಯಾ ಸಂಹಿತೆಯ 58 ನೇ ನಿಯಮದ 21 ನೇ ಕ್ರಮಾದೇಶದ ಅಡಿಯಲ್ಲಿ ಅರ್ಜಿಗೆ ಸಂಬಂಧಿಸಿದಂತೆ ದಿನಾಂಕ 25.07.1987 ರಂದು ಸಂಕೀರ್ಣ ಮೊಕದ್ದಮೆಯ ಸಂಖ್ಯೆ 14/1983 ರಲ್ಲಿ ಆದೇಶವನ್ನು ಹೊರಡಿಸಿದ ಅಥವಾ ನಂತರದ ದಿನಾಂಕಗಳನ್ನು ಒಳಗೊಂಡು ಆ ದಿನಾಂಕಗಳಂದು ಸ್ವಾಧೀನವನ್ನು ಪಡೆಯುವ ದಾವೆಯನ್ನು ಸಲ್ಲಿಸಬೇಕಾಗಿತ್ತೆಂದು ಎದುರುದಾರರು ನಿರ್ದಿಷ್ಟವಾಗಿ ವಾದಿಸಿದ್ದಾರೆ.ಆ ಮೂಲಕ, ಸಾಲಗಾರರಾದ ಶ್ರೀಮತಿ ರುದ್ರಮ್ಮನ ಸೂಚನೆಯಂತೆ ಅಮಲ್ಜಾರಿ ಮೊಕದ್ದಮೆ ಸಂಖ್ಯೆ.69/1982 ರಲ್ಲಿನ ವ್ಯವಹರಣೆಗಳಿಗೆ ಅನುಗುಣವಾಗಿ ದಾವಾ ಅನುಸೂಚಿತ ಸ್ವತ್ತಿನ ಜಪ್ತಿಯನ್ನು, ಶ್ರೀ ಹೆಚ್.ಸಿ. ನಾಗಪ್ಪರವರ ಸೂಚನೆಯ ಮೇರೆಗೆ ಖಾಲಿಮಾಡಬೇಕಾಗಿ ಬಂದಿತ್ತು.ಅಂಥ ವ್ಯವಹರಣೆಗಳಲ್ಲಿ, ಶ್ರೀ ಹೆಚ್.ಸಿ. ನಾಗಪ್ಪರವರು ಪ್ರತಿಕೂಲ ಸ್ವಾಧೀನದಲ್ಲಿದ್ದರೆಂದು ತಿಳಿದುಬಂದಿತ್ತು.ಆರ್.ಆರ್.ಟಿ.ಸಂಖ್ಯೆ: 21/1989-90 ರಲ್ಲಿನ ವ್ಯವಹರಣೆಗಳಲ್ಲಿ ಮತ್ತು ಎಂ.ಆರ್.ಸಂಖ್ಯೆ 19/1989-90 ರಲ್ಲಿ ಹೊರಡಿಸಲಾದ ಆದೇಶದ ಮೇರೆಗೆ ಶ್ರೀಮತಿ ತೈರುನ್ನಿಸಾರವರ ಹೆಸರಿನಲ್ಲಿರುವ ನಮೂದನ್ನು ಏಕಕಾಲದಲ್ಲಿ ಅಳಿಸಿಹಾಕುವಾಗ, ಒಮ್ಮೆ ರೂಪಾಂತರ ನಮೂದನ್ನು ದಿನಾಂಕ 03.03.1990 ರ ಆದೇಶದ ಮೂಲಕ ಶ್ರೀ ಹೆಚ್.ಸಿ. ನಾಗಪ್ಪರವರ ಹೆಸರಿನಲ್ಲಿ ನಮೂದಿಸಿದ ನಂತರ ದೂರುದಾರರಿಗೆ, ಪ್ರತಿಕೂಲ ಸ್ವಾಧೀನದ ನೋಟೀಸನ್ನು ನೀಡಲಾಯಿತು ಶ್ರೀಮತಿ ನೂರ್ ಅಫ್ತಾಬ್ ಪರ್ವಿನ್ ಹಾಗೂ ಇತರರು -ವಿರುದ್ಧ ಶ್ರೀ ಹೆಚ್.ಎನ್. ಚಂದ್ರಶೇಖರ್ (ಮೃತ) ರವರ ಕಾನೂನು ವಾರಸುದಾರರು ಹಾಗೂ ಇತರರು 1543

ಎಂಬ ಸಂಗತಿಯನ್ನೂ ಒತ್ತಿಹೇಳಲಾಗಿದೆ.ತದನುಸಾರವಾಗಿ, ಪ್ರಸ್ತುತ ದಾವೆಯನ್ನು, ಸಕಾಲದಲ್ಲಿ ನಿರ್ಬಂಧಿಸಲಾಯಿತೆಂದು ನಿವೇದಿಸಲಾಗಿದೆ.

(ii) ದೂರುದಾರರು, ದಿನಾಂಕ 01.01.1971 ರಂದು ಮಾರಾಟದ ಒಪ್ಪಂದವನ್ನು ಹಿಂತೆಗೆದುಕೊಂಡಿದ್ದರೆಂದು ಮತ್ತು ಶ್ರೀಮತಿ ತೈರುನ್ನಿಸಾರವರು ಶ್ರೀ ಹೆಚ್.ಸಿ. ನಾಗಪ್ಪರವರ ವಿರುದ್ಧ ಸಲ್ಲಿಸಿದ್ದ ಓ.ಎಸ್.ಸಂಖ್ಯೆ 53/1972 ರಲ್ಲಿನ ತಡೆಯಾಜ್ಞೆ ದಾವೆಯನ್ನು, ದಿನಾಂಕ 14.12.1973 ರಂದು ವಜಾಗೊಳಿಸಲಾಯಿತೆಂದು ದಾಖಲೆಯಲ್ಲಿರುವ ವಿಷಯವಾಗಿರುತ್ತದೆ.ಶ್ರೀ ಹೆಚ್.ಸಿ. ನಾಗಪ್ಪರವರ ಸೂಚನೆಯ ಮೇರೆಗೆ, ಶ್ರೀಮತಿ ರುದ್ರಮ್ಮರವರು ಶ್ರೀಮತಿ ತೈರುನ್ನಿಸಾರವರಿಗೆ ನೀಡಿದ ಮೊಬಲಗನ್ನು ವಾಪಸುಪಡೆಯುವ ವ್ಯವಹರಣೆಗಳಿಗೆ ಸಂಬಂಧಿಸಿದ ಅಮಲ್ಜಾರಿ ಮೊಕದ್ದಮೆ ಸಂಖ್ಯೆ 69/1982 ರಲ್ಲಿ ದಾವಾ ಅನುಸೂಚಿತ ಸ್ವತ್ತುಗಳ ಜಪ್ತಿಯನ್ನು, ಶ್ರೀ ಹೆಚ್.ಸಿ. ನಾಗಪ್ಪರವರು ಪ್ರತಿಕೂಲ ಸ್ವಾಧೀನದಲ್ಲಿದ್ದಾರೆಂದು ಅಭಿಪ್ರಾಯಪಡುವಾಗ, ದಿನಾಂಕ

25.07.1987 ರಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆಯ 58 ನೇ ನಿಯಮದ 21 ನೇ ಕ್ರಮಾದೇಶದ ಅಡಿಯಲ್ಲಿ ಸಲ್ಲಿಸಲಾಗಿದ್ದ ಸಂಕೀರ್ಣ ಮೊಕದ್ದಮೆ ಸಂಖ್ಯೆ.14/1983 ರಲ್ಲಿ ತೆರವುಗೊಳಿಸಬೇಕಾಗಿ ಬಂತು ಎಂಬುದು ದಾಖಲೆಯಲ್ಲಿರುವ ವಿಷಯವಾಗಿರುತ್ತದೆ.

(ii) ಆದಾಗ್ಯೂ, ಮಾರಾಟದ ಒಪ್ಪಂದದ ನಿರ್ದಿಷ್ಟ ಪಾಲನೆಯನ್ನು ಕೋರಿ ಶ್ರೀ ಹೆಚ್.ಸಿ. ನಾಗಪ್ಪರವರು 1989 ರಲ್ಲಿ ಓ.ಎಸ್.ಸಂಖ್ಯೆ 237/1989 ರಲ್ಲಿ ದಾವೆಯನ್ನು ಹೂಡಿದ್ದರು, ಅವರ ಮೂಲಕ ಎದುರುದಾರರು ಕೇಮನ್ನು ಮಾಡಿ, ಅದನ್ನು ವಜಾಗೊಳಿಸಿದ ತರುವಾಯ, ಆರ್.ಎ. ಸಂಖ್ಯೆ.50/1991 ರನ್ನು ಸಲ್ಲಿಸಲಾಯಿತು.ದಿನಾಂಕ 03.03.2000 ರಂದು ಮಾತ್ರ, ಒಪ್ಪಂದದ ನಿರ್ದಿಷ್ಟ ಪಾಲನೆಯ ಮನವಿಯನ್ನು ಕೈಬಿಟ್ಟು ಮತ್ತು ಪ್ರತಿಕೂಲ ಸ್ವಾಧೀನಕ್ಕೆ ಸಂಬಂಧಿಸಿದ ಮನವಿಯನ್ನು ನಿರ್ಬಂಧಿಸುವ ಮೆನೋವನ್ನು ಸಲ್ಲಿಸಲಾಯಿತು.ಮೇಲ್ಕಂಡ ಪ್ಯಾರಾ -6 (   ಎ)(vi) ರಲ್ಲಿ ಚರ್ಚಿಸಲಾದಂತೆ, ದಿನಾಂಕ 03.03.2000 ರಂದು ಪ್ರತಿಕೂಲ ಸ್ವಾಧೀನದ ಅವಧಿಯು ಪ್ರಾರಂಭವಾಗುತ್ತದೆ.ದಾವೆಯನ್ನು 2006 ರಲ್ಲಿ ಅಂದರೆ,



03.03.2000 ರ 12 ವರ್ಷಗಳ ಒಳಗಾಗಿ ಸಲ್ಲಿಸಲಾಗಿರುವುದರಿಂದ, ದೂರುದಾರರು ಸ್ವಾಮ್ಯವನ್ನು ಅಂತ್ಯಗೊಳಿಸುವ ಮೂಲಕ ದಾವೆಯನ್ನು ಸಲ್ಲಿಸಿದ ದಿನಾಂಕದಂದು ಇದ್ದಂತೆ ಪ್ರತಿಕೂಲ ಸ್ವಾಧೀನದ ಮೂಲಕ ಪ್ರತಿವಾದಿಯ ಸ್ವಾಮ್ಯವನ್ನು ಪಡೆದಿದ್ದನೆಂದು ಹೇಳಲಾಗುವುದಿಲ್ಲ.

(iv) ಅಂತಿಮವಾಗಿ, ಆರ್.ಎಸ್.ಎ ಸಂಖ್ಯೆ 1034/2005 ರಲ್ಲಿ ಮುಕ್ತಾಯಗೊಂಡ ಆರ್.ಎ.ಸಂಖ್ಯೆ 50/1991 ರಲ್ಲಿನ ವ್ಯವಹರಣೆಗಳನ್ನು ದಿನಾಂಕ 12.12.2005 ರಂದು ವಿಲೆ ಮಾಡಲಾಯಿತು.ಆರ್.ಎ.ಸಂಖ್ಯೆ 150/1991 ಮತ್ತು ಆರ್.ಎಸ್.ಎ. ಸಂಖ್ಯೆ 1034/2005 ಗಳೆರಡೂ ಮೊಕದ್ದಮೆಗಳಲ್ಲಿ ಶ್ರೀಮತಿ ತೈರುನ್ನಿಸಾ ರವರು ಬರೆದುಕೊಟ್ಟ ಮಾರಾಟದ ಒಪ್ಪಂದದ ಅಡಿಯಲ್ಲಿ ಸ್ವಾಧೀನವನ್ನು ವಿಲೆ ಮಾಡುವುದಕ್ಕನುಗುಣವಾಗಿ ಎದುರುದಾರರು ಇತ್ಯರ್ಥಗೊ ಂ ಡ ಸ್ವಾಧೀನದಲ್ಲಿರುವುದರಿಂದ, ದೂರುದಾರರಿಗೆ ಇರಬಹುದಾದ ಮಾರ್ಗವೆಂದರೆ, ಸ್ವಾಧೀನವನ್ನು ವಾಪಸ್ಸು ಪಡೆಯುವುದಕ್ಕಾಗಿ ವ್ಯವಹರಣೆಗಳನ್ನು ಹೂಡುವುದಾಗಿತ್ತು ಎಂದು ನ್ಯಾಯಾಲಯವು ನಿರ್ದಿಷ್ಟವಾಗಿ ಅಭಿಪ್ರಾಯಪಟ್ಟಿವೆ.ದಿನಾಂಕ 12.12.2005 ರಂದು ಆರ್.ಎಸ್.ಎ.ಸಂಖ್ಯೆ.1034/2005 ನ್ನು ವಿಲೆ ಮಾಡಿದ ಕೂಡಲೇ, ಪ್ರಸ್ತುತ ದಾವೆಯನ್ನು, ಎಂದರೆ, ಓ.ಎಸ್.ಸಂಖ್ಯೆ.95/2006 ರನ್ನು ದಿನಾಂಕ 07.12.2006 ರಂದು ಹೂಡಲಾಗಿದೆ.

(ಸಿ) ಸ್ವಾಧೀನದ ಉದ್ದೇಶವಿಲ್ಲದ ಬರಿಯ ಸ್ವಾಧೀನವು ಸಮರ್ಪಕವಾಗಿರುವುದಿಲ್ಲ:

( 6) ಗಮನಿಸಬೇಕಾದ ಮತ್ತೊಂದು ಅಂಶವೆಂದರೆ, ಅಗತ್ಯ ಸ್ವಾಧೀನದ ಉದ್ದೇಶವಿಲ್ಲದೆ ಬರಿಯ ಸ್ವಾಧೀನವು ದೂರುದಾರರು ಬರೆದುಕೊಟ್ಟ ಮಾರಾಟದ ಒಪ್ಪಂದದ ಅಡಿಯಲ್ಲಿ ಸ್ವಾಧೀನವಾಗಿ ಪ್ರತಿಕೂಲವಾಗಿರುವ ಸ್ವಾಧೀನದೊಳಗೆ ಬದಲಾಯಿಸಲಾಗುವುದಿಲ್ಲ.ಇಲ್ಲಿ ಉದ್ದೇಶದ ಸ್ವರೂಪ ಮತ್ತು ಅದರ ಕೊರತೆಯ

ಸ್ವರೂಪವು, ನಿರ್ದಿಷ್ಟಪಾಲನೆಯ ಪರಿಹಾರವನ್ನು ಕೋರಿ ಓ.ಎಸ್.ಸಂಖ್ಯೆ:237/1989 ರನ್ನು ಸಲ್ಲಿಸುವುದರ ಮೇಲೆ ಸ್ಪಷ್ಟವಾಗುತ್ತದೆ.

ಮಾರಾಟದ ಒಪ್ಪಂದವನ್ನು ಶ್ರೀಮತಿ ನೂರ್ ಅಫ್ತಾಬ್ ಪರ್ವಿನ್ ಹಾಗೂ ಇತರರು -ವಿರುದ್ಧ ಶ್ರೀ ಹೆಚ್.ಎನ್. ಚಂದ್ರಶೇಖರ್ (ಮೃತ) ರವರ ಕಾನೂನು ವಾರಸುದಾರರು ಹಾಗೂ ಇತರರು 1545

ಶ್ರೀಮತಿ ತೈರುನ್ನಿಸಾರವರು ಹಿಂತೆಗೆದುಕೊಂಡರೆಂದು ಹೇಳಲಾದ ದಿನಾಂಕ 01.01.1971 ರ ಮತ್ತು ಓ.ಎಸ್.ಸಂಖ್ಯೆ 237/1989 ನ್ನು ಸಲ್ಲಿಸಿದ್ದ ದಿನಾಂಕ 01.03.1989 ರ ನಡುವೆ ಸ್ವಾಧೀನವನ್ನು ವಾಪಸ್ಸು ಪಡೆದುಕೊಳ್ಳುವುದಕ್ಕಾಗಿ ದಾವೆಯನ್ನು ಹೂಡುವಲ್ಲಿ ವಾದಿಯ ನಿಷ್ಕ್ರಿಯತೆಯನ್ನು ಎತ್ತಿತೋರಿಸುವ ಮೂಲಕ ಎದುರುದಾರರು ಕ್ಲೇಮು ಮಾಡಿದ ಯಾವುದಾದರೂ ಕಾನೂನುಬದ್ಧ ಪ್ರಯೋಜನಗಳಿದ್ದರೆ, ಅವುಗಳನ್ನು ದಿನಾಂಕ 01.03.1989 ರಂದು ನಿರ್ದಿಷ್ಟ ಪಾಲನೆಗಾಗಿ ದಾವೆಯನ್ನು ಸಲ್ಲಿಸುವ ಮೂಲಕ ದೂರುದಾರರ ಸ್ವಾಮ್ಯವನ್ನು ಅಂಗೀಕರಿಸುವಲ್ಲಿ ಎದುರುದಾರರ ಕೃತ್ಯದ ಮೂಲಕ ತೆಗೆದುಹಾಕಲಾಗಿದೆ.

(   i) ವಾಸ್ತವವಾಗಿ, " ವಿಲೆಯ ಉದ್ದೇಶ " ವನ್ನು ಅರ್ಥೈಸಿಕೊಳ್ಳುವ ಸಂಬಂಧದಲ್ಲಿ ಪೊವೆಲ್ -ವಿರುದ್ಧ- ಮೆಕ್ಫಾರ್ಲೇನ್ ಮತ್ತು ಮತ್ತೊಬ್ಬರು ಮೊಕದ್ದಮೆಯಲ್ಲಿ ಈ ಮುಂದಿನಂತೆ ಅಭಿಪ್ರಾಯಪಡಲಾಗಿದೆ:

" ( 2) ಭೂಸ್ವಾಧೀನಕ್ಕೆ ಯಾವುದೇ ಕಾಗದ ಪತ್ರವನ್ನು ಸಾಬೀತುಪಡಿಸಲು ಸಾಧ್ಯವಾಗದ ಯಾರೇ ವ್ಯಕ್ತಿಗೆ ಕಾನೂನು ಕಾರಣವಾಗಿದ್ದರೆ, ಆತನು ವಾಸ್ತವಿಕ ಸ್ವಾಧೀನ ಮತ್ತು ಸ್ವಾಧೀನ ಹೊಂದಲು ಅಗತ್ಯ ಉದ್ದೇಶ ಎರಡನ್ನು ಹೊಂದಿರುವುದನ್ನು ತೋರಿಸಬೇಕು.( “ ಸ್ವಾಧೀನ್ನೋದ್ದೇಶ ')

66 ಆತನ ಕಾರ್ಯಗಳು ಒಂದಕ್ಕಿಂತ ಹೆಚ್ಚು ಅರ್ಥ ವಿವರಣೆಗಳಿಗೆ ತೆರೆದುಕೊಂಡಿದ್ದರೆ, ಮತ್ತು ಆತನು, ಸಾಧ್ಯವಾದಷ್ಟು ಮಟ್ಟಿಗೆ ಮಾಲೀಕನನ್ನು ಹೊರಗಿಡಲು ಉದ್ದೇಶಿಸಿದ್ದಾನೆಂದು ತನ್ನ ಕಾವ್ಯಗಳು ಅಥವಾ ಮಾತುಗಳಿಂದ ಅದನ್ನು ಸಂಪೂರ್ಣವಾಗಿ ಜಗತ್ತಿಗೆ ಸ್ಪಷ್ಟಪಡಿಸಿದ್ದರೆ, ಆಗ ನ್ಯಾಯಾಲಯಗಳು, ಆತನು ಅಗತ್ಯ ಸ್ವಾಧೀನದ ಕರ್ನಾಟಕ ತೀರ್ಪುಗಳ ವರದಿ 2021

ಉದ್ದೇಶವನ್ನು ಹೊಂದಿಲ್ಲ.ತತ್ಪರಿಣಾಮವಾಗಿ, ಆತನು ಮಾಲೀಕನ ಸ್ವಾಧೀನತ್ವವನ್ನು ಅವನಿಂದ ಕಿತ್ತುಕೊಳ್ಳಲು ಸಾಧ್ಯವಿಲ್ಲವೆಂದು ಪರಿಗಣಿಸುವುದು.

(iii) ಸೂಚಿಸಲಾದಂತೆ, ನಿರ್ದಿಷ್ಟ ಪಾಲನೆಗಾಗಿ ದಾವೆಯನ್ನು ಹೂಡುವ ಮೊದಲು ಪ್ರತಿದೂರುದಾರರು ತಮ್ಮ ಸ್ವಾಧೀನವನ್ನು ಪ್ರತಿಕೂಲ ಸ್ವಾಧೀನವೆಂದು ವಾದಿಸಲು ಅವಲಂಬಿಸಿರುವ ಘಟನೆಗಳನ್ನು, ಗಣನೆಗೆ ತೆಗೆದುಕೊಳ್ಳದಿರುವುದು ಮತ್ತು ಶ್ರೀಮತಿ ತೈರುನ್ನಿಸಾರವರನ್ನು ಮಾಲೀಕರೆಂದು ಸ್ಪಷ್ಟವಾಗಿ ಒಪ್ಪಿಕೊಂಡು ನಿರ್ದಿಷ್ಟ ಪಾಲನೆಗಾಗಿ ಓ.ಎಸ್.ಸಂಖ್ಯೆ 237/1989 ಅನ್ನು ಸಲ್ಲಿಸಿರುವಲ್ಲಿ ಎದುರುದಾರರ ನಂತರದ ವರ್ತನೆಯು ದ್ವಂದ್ವಯುತ ನಡವಳಿಕೆಯಾಗಿರುವುದು ಪೊವೆಲ್ ರವರ ಮೊಕದ್ದಮೆಯಲ್ಲಿ (ಮೇಲಿನಂತೆ) ವಿವರಿಸಲಾದ ನಿಯಮದ ಹಿನ್ನಲೆಯಲ್ಲಿ ಸ್ವಾಧೀನೋದ್ದೇಶ C ' ದೊಂದಿಗೆ ಸ್ವಾಧೀನವನ್ನು ಸೂಚಿಸುವಷ್ಟು ಸ್ಪಷ್ಟವಾಗಿಲ್ಲ.ತದನುಸಾರವಾಗಿ, ದಿನಾಂಕ 03.03.2000 ರವರೆಗೆ ದೂರುದಾರರಿಗೆ ಎಂದಿಗೂ ಸ್ವಾಧೀನತೆಯನ್ನು ತಪ್ಪಿಸಲಾಗಿದೆ ಎಂದು ಹೇಳಲಾಗುವುದಿಲ್ಲ.

(iv) ಸೂಚಿಸಲಾದಂತೆ, ದೂರುದಾರರ ಸ್ವಾಧೀನವನ್ನೂ ಪ್ರತಿಕೂಲ ಸ್ವಾಧೀನವೆಂದು ವರ್ಗೀಕರಿಸುವ ಮೂಲಕ ಮತ್ತು ಅಂಥ ಪ್ರತಿಕೂಲ ಸ್ವಾಧೀನದ 12 ವರ್ಷಗಳನ್ನು ಪೂರ್ಣಗೊಳಿಸುವುದರ ಮೂಲಕ ದೂರುದಾರರ ಕಾನೂನುಸಮ್ಮತ ಸ್ವಾಮ್ಯವು ಅಂತ್ಯವಾಗುವುದಿಲ್ಲ.ಎದುರುದಾರರಲ್ಲಿ ಸ್ವಾಮ್ಯದ ಪರಿಪೂರ್ಣತೆಯ ಮೂಲಕ ದೂರುದಾರರ ಸ್ವಾಮ್ಯವು ಹಾಗೆ ಅಂತ್ಯಗೊಳ್ಳುವವರೆಗೆ, ದೂರುದಾರರು, ಕಾರ್ಯಗತಗೊಳಿಸಲು ಕೋರಿದ ಸ್ವಾಧೀನವನ್ನು ವಾಪಸುಪಡೆಯುವ ಸಲುವಾಗಿ ದಾವೆ ಹೂಡುವ ಹಕ್ಕು ಅಂತ್ಯಗೊಳ್ಳುತ್ತದೆ ಎಂದು ಹೇಳಲು ಸಾಧ್ಯವಾಗುವುದಿಲ್ಲ.ಎದುರುದಾರರ ಹಕ್ಕನ್ನು ಅಂತ್ಯಗೊಳಿಸುವ ಹಾಗೆ ಪ್ರತಿಕೂಲ ಸ್ವಾಧೀನದ ಮೂಲಕ ದೂರುದಾರರು ನಿಜವಾದ ಸ್ವಾಮ್ಯವನ್ನು ಪಡೆದುಕೊಳ್ಳುವವರೆಗೆ, ಸ್ವಾಧೀನಕ್ಕಾಗಿ ದಾವೆ ಹೂಡುವ ದೂರುದಾರರ ಹಕ್ಕು ಹಾಗೇ ಉಳಿದಿರುತ್ತದೆಂದು ಖಚಿತವಾಗಿ ಹೇಳಬಹುದಾಗಿದೆ.

ಇದೊಂದೇ, ಕಾಲ ಪರಿಮಿತಿ ಅಧಿನಿಯಮದ 27 ನೇ ಪ್ರಕರಣದ ಶ್ರೀಮತಿ ನೂರ್ ಅಫ್ತಾಬ್ ಪರ್ವಿನ್ ಹಾಗೂ ಇತರರು -ವಿರುದ್ಧ ಶ್ರೀ ಹೆಚ್.ಎನ್. ಚಂದ್ರಶೇಖರ್ (ಮೃತ) ರವರ ಕಾನೂನು ವಾರಸುದಾರರು ಹಾಗೂ ಇತರರು 1547

ಅಡಿಯಲ್ಲಿ ದೂರುದಾರರ ಹಕ್ಕನ್ನು ಅಂತ್ಯಗೊಳಿಸಲು ಕಾರಣವಾಗುವುದು.ತದನುಸಾರವಾಗಿ, ಸ್ವಾಧೀನವನ್ನು ವಾಪಸ್ಸು ಪಡೆಯಲು ದಾವೆ ಹೂಡುವ ದೂರುದಾರರ ಹಕ್ಕನ್ನು, ಕಾಲ ಪರಿಮಿತಿ ಅಧಿನಿಯಮದ 27 ನೇ ಪ್ರಕರಣದ ಅಡಿಯಲ್ಲಿ ಸ್ಥಗಿತಗೊಳಿಸಲಾಗುವುದಿಲ್ಲ.

ಆದಾಗ್ಯೂ, ಕಾನೂನಿನ ಗಮನಾರ್ಹ ಪ್ರಶ್ನೆ ಸಂಖ್ಯೆ 1 ಕ್ಕೆ ನಕಾರಾತ್ಮಕವಾಗಿ ಉತ್ತರಿಸಲಾಗಿರುತ್ತದೆ.

II.ಕಾನೂನಿನ ಗಮನಾರ್ಹ ಪ್ರಶ್ನೆ ಸಂಖ್ಯೆ 2:

66 " ವಾದಿಯು, ಸ್ವತ್ತಿನ ಸ್ವಾಮ್ಯವನ್ನು ಹೊಂದಿರಲಿಲ್ಲವೆಂದು ಮತ್ತು ತದನುಸಾರವಾಗಿ ಕಾಲಪರಿಮಿತಿ ಅಧಿನಿಯಮದ 65 ನೇ ಅನುಚ್ಛೇದದ ಅಡಿಯಲ್ಲಿ ಸ್ವಾಮ್ಯದ ಘೋಷಣೆಗಾಗಿ ಕೋರದೇ ಸ್ವಾಧೀನವನ್ನು ವಾಪಸು ಪಡೆಯಲು ಪ್ರಸ್ತುತ ದಾವೆಯನ್ನು ಹೂಡಿರುವುದು ಸಮರ್ಥನೀಯವಾಗಿರಲಿಲ್ಲ ಎಂದು ಅಧಿವಿಚಾರಣಾ ನ್ಯಾಯಾಲಯ ಮೊದಲನೇ ಅಪೀಲು ನ್ಯಾಯಾಲಯಗಳು ನೀಡಿರುವ ಸಮವರ್ತಿ

ನಿರ್ಣಯಗಳು ದಾಖಲೆಯಲ್ಲಿನ ಸಾಕ್ಷ್ಯ ಮತ್ತು ಮನವಿಗಳು ಮತ್ತು ದೂರುದಾರರು ಪ್ರತಿವಾದಿಸಿದಂಥ ಹಕ್ಕುಗಳ ಹಿನ್ನೆಲೆಯಲ್ಲಿ ಸಮರ್ಥನೀಯವಾಗಿದೆಯೇ?"

( 1) ಎರಡು ನ್ಯಾಯಾಲಯಗಳು, ಎಂದರೆ, ಆರಂಭ ವಿಚಾರಣೆಯ ನ್ಯಾಯಾಲಯ ಮತ್ತು ಮೊದಲನೇ ಅಪೀಲು ನ್ಯಾಯಾಲಯಗಳು ಶ್ರೀಮತಿ ತೈರುನ್ನಿಸಾರವರು ತನ್ನ ಸಹೋದರನ ಕಾರಣದಿಂದ ವಿಭಜನೆಯಲ್ಲಿ ದಾವಾ ಅನುಸೂಚಿತ ಸ್ವತ್ತುಗಳಿಗೆ ಸಂಬಂಧಪಟ್ಟ ಹಕ್ಕುಗಳನ್ನು ಬಿಟ್ಟು ಕೊಟ್ಟಿರುವುದಾಗಿ ಮಾಡಿರುವ ಸಮರ್ಥನೆಯ ಕಾರಣದಿಂದ, ಶ್ರೀಮತಿ ತೈರುನ್ನಿಸಾರವರ ಪರವಾಗಿ ಆಕೆಯ ಸಹೋದರ ಶ್ರೀ ಕಾಸಿಮ್ಸಾಬ್ ಸದರಿ ಸ್ವತ್ತುಗಳನ್ನು ಕಾನೂನುಬದ್ಧವಾಗಿ ವರ್ಗಾಯಿಸುವ



ಮೂಲಕ ಬೆಂಬಲಿಸಿಲ್ಲದಿರುವುದರಿಂದ ದೂರುದಾರರ ಸ್ವಾಮ್ಯವನ್ನು ನಿರಪೇಕ್ಷಣೀಯವೆಂದು ಪರಿಗಣಿಸಲಾಗುವುದಿಲ್ಲವೆಂದು ಸಮವರ್ತಿಯಾಗಿ ಅಭಿಪ್ರಾಯಪಟ್ಟಿದೆ.

(ii) ಕಾಲ ಪರಿಮಿತಿ ಅಧಿನಿಯಮದ 64 ನೇ ಅನುಚ್ಛೇದವನ್ನು ಈ ಮುಂದಿನಂತೆ ಓದಲಾಗಿದೆ:

| **ದಾವೆಯ ವಿವರಣೆ** | **ಕಾಲ ಪರಿಮಿತಿಯ ಅವಧಿ** | **ಪರಿಗಣನಾ ಅವಧಿ ಪ್ರಾರಂಭದ ಸಮಯ** |
|---|---|---|
| ದೂರದಾರರು ಸ್ವತ್ತಿನ ಸ್ವಾಧೀನವನ್ನು ಹೊಂದಿದ್ದಾಗ , ಅದನ್ನು ಇತರರು ತಪ್ಪಿಸಿದ್ದರೆ , ಅಸ್ಥಿರ ಸ್ವತ್ತಿನ ಹಕ್ಕಿನ ಆಧಾರದ ಮೇಲಲ್ಲದೆ ಪೂರ್ವಸ್ವಾಧೀನತೆಯ ಆಧಾರದ ಮೇಲೆ ಅದನ್ನು ಸ್ವಾಧೀನಪಡಿಸಿಕೊಳ್ಳಲು ದಾವೆ | ಹನ್ನೆರಡು ವರ್ಷಗಳು | ಸ್ವಾಧೀನತೆಯ ದಿನಾಂಕದಿಂದ |

ಪ್ರಸ್ತುತ ಮೊಕದ್ದಮೆಯಲ್ಲಿ, ಎದುರುದಾರರಿಗೆ ಸ್ವಾಧೀನವನ್ನು ಹಸ್ತಾಂತರಿಸುವುದು ಮಾರಾಟದ ಒಪ್ಪಂದದಡಿಯಲ್ಲಿರುವುದರಿಂದ, ಯಾವುದೇ ಸಮಯದಲ್ಲೂ ಯಾವುದೇ ವಿಲೇವಾರಿ ನಡೆದಿಲ್ಲ.ವಾಸ್ತವವಾಗಿ, ದೂರುದಾರರ ಕ್ಲೇಮು, ಯಾವಾಗಲೂ ಶ್ರೀಮತಿ ತೈರುನ್ನಿಸಾರವರಲ್ಲಿ ನಿಹಿತವಾದ ಹಕ್ಕನ್ನು ಆಧರಿಸಿದೆ.ಅದರಂತೆ, ಕಾಲ ಪರಿಮಿತಿ ಅಧಿನಿಯಮದ 64 ನೇ ಅನುಚ್ಛೇದವು, ಪ್ರಸ್ತುತ ದಾವೆಗೆ ಅನ್ವಯವಾಗುವುದಿಲ್ಲ ಎಂಬ ನಿರ್ಣಯವನ್ನು ಅಂಗೀಕರಿಸುವುದು ಅಗತ್ಯ.

96 ಶ್ರೀಮತಿ ನೂರ್ ಅಫ್ತಾಬ್ ಪರ್ವಿನ್ ಹಾಗೂ ಇತರರು -ವಿರುದ್ಧ ಶ್ರೀ ಹೆಚ್.ಎನ್. ಚಂದ್ರಶೇಖರ್ (ಮೃತ) ರವರ ಕಾನೂನು ವಾರಸುದಾರರು ಹಾಗೂ ಇತರರು 1549

(iii) ಶ್ರೀಮತಿ ತೈರುನ್ನಿಸಾ ಸಹೋದರ ಶ್ರೀ ಕಾಸಿಂಸಾಬ್ರುವರು ಆಕೆಗೆ ಸ್ವತ್ತನ್ನು ವರ್ಗಾವಣೆ ಮಾಡಿರುವ ಬಗ್ಗೆ ಯಾವುದೇ ದಸ್ತಾವೇಜು ಇರಲಿಲ್ಲದಿರುವುದರಿಂದ, ಸ್ವತ್ತಿಗೆ ಸ ಂ ಬ ಂ ಧಿಸಿದ ಹಕ್ಕು ಶ್ರೀಮತಿ ತೈರುನ್ನಿಸಾ ರವರಲ್ಲಿ ನಿಹಿತವಾಗಿಲ್ಲದಿರುವುದರಿಂದ ಕಾಲ ಪರಿಮಿತಿ ಅಧಿನಿಯಮದ 6 ನೇ ಅನುಚ್ಛೇದವು ಅನ್ವಯಿಸಲಾಗುವುದಿಲ್ಲ ಎಂಬ ಮೊದಲನೇ ಅಪೀಲು ನ್ಯಾಯಾಲಯದ ನಿರ್ಣಯದ ಮಟ್ಟಿಗೆ ತಪ್ಪಾಗಿದ್ದು, ಹಸ್ತಕ್ಷೇಪ ಮಾಡುವುದು ಅಗತ್ಯವಾಗುತ್ತದೆ.

(iv) ಭಾರತ ಒಕ್ಕೂಟ ಮತ್ತು ಇತರರು -ವಿರುದ್ಧ ವಾಸವಿ ಕೊ-ಆಪರೇಟಿವ್ ಸೊಸೈಟಿ ಅಮಿಟೆಡ್ ಮತ್ತು ಮತ್ತೊಬ್ಬರು ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪಿನಂತೆ ಎದುರುದಾರರು ತಮ್ಮ ಮೊಕದ್ದಮೆಯನ್ನು ಸಾಬೀತು ಪಡಿಸಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ಗಣನೆಗೆ ತೆಗೆದುಕೊಳ್ಳದೇ ದೂರುದಾರರು, ತಮ್ಮ ಮೊಕದ್ದಮೆಯ ಬಲದ ಮೇಲೆ ಯಶಸ್ವಿಯಾಗಬೇಕೆಂದು ಎದುರುದಾರರ ಪರ ಮಾನ್ಯ ವಕೀಲರು ವಾದಿಸಿದ್ದಾರೆ.ಅಲ್ಲದೆ, ಕಂದಾಯದ ನಮೂದು ಹಕ್ಕನ್ನು ಕೊಡುವುದಿಲ್ಲವೆಂದು ಪ್ರತಿವಾದಿಸುತ್ತಾ, ಅವರು, ಹಿಮಾಚಲ ಪ್ರದೇಶ (ಹೆಚ್.ಪಿ.) ರಾಜ್ಯ -ವಿರುದ್ಧ ಕೇಶವ್ ರಾಮ್ ಮತ್ತು ಇತರರು ಮೊಕದ್ದಮೆಯಲ್ಲಿ ಅಪೆಕ್ಸ್ ನ್ಯಾಯಾಲಯ ನೀಡಿದ ತೀರ್ಪಿನ ಮೇಲೆ ಅವಲಂಬಿತರಾಗಿದ್ದಾರೆ.ದೂರುದಾರರ ಬಗ್ಗೆ ಅಸ್ಪಷ್ಟತೆ ಇದ್ದಾಗ ಮತ್ತು ಸ್ವಾಧೀನವನ್ನು, ಮರು ಸ್ವಾಧೀನ ಪಡೆಯಲು ಕೋರಿರುವಲ್ಲಿ, ಅನತುಲಾ ಸುಧಾಕರ್ ವಿರುದ್ಧ ಪಿ. ಬೂಚಿ ರೆಡ್ಡಿ (ಮೃತರಾಗಿರುವುದರಿಂದ) ಅವರ ಕಾನೂನು ಸಮ್ಮತ ವಾರಸುದಾರರಿಂದ ಪ್ರತಿನಿಧಿತ ಮತ್ತು ಇತರರು ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿರುವಂತೆ ಘೋಷಣೆಯನ್ನು ಕೋರಬೇಕೆಂದು ನಿರ್ದಿಷ್ಟವಾಗಿ ಪ್ರತಿಪಾದಿಸಲಾಗಿರುತ್ತದೆ.ಇದರಲ್ಲಿ ಮೇಲೆ ಉಲ್ಲೇಖಿಸಲಾದ ತೀರ್ಪುಗಳಲ್ಲಿ ಹೇಳಲಾದ ಕಾನೂನಿನ ನಿಯಮದ ಸ ಂ ಬ ಂ ಧದಲ್ಲಿ ಯಾವುದೇ ವಿವಾದವಿರುವುದಿಲ್ಲವಾದಾಗ್ಯೂ, ಅದರಲ್ಲಿನ ಕೆಳಭಾಗದಲ್ಲಿನ ಚರ್ಚೆಯ ಹಿನ್ನಲೆಯಲ್ಲಿ, 1550

ಶ್ರೀಮತಿ ತೈರುನ್ನಿಸಾರವರ ಹಕ್ಕು ಮೇಲ್ವರ್ಗದ ಹಕ್ಕಾಗಿದೆಯೆಂದು, ದೂರುದಾರರು ಅವಲಂಬಿಸಿರುವ ಪ್ರಾಧಿಕಾರಿಗಳು ಲಭ್ಯವಿರುವುದಿಲ್ಲವೆಂದು ನಿರ್ಣಯಿಸಲಾಗಿರುತ್ತದೆ.

( v) ವಾಸ್ತವವಾಗಿ, ಪ್ರಸ್ತುತ ದಾವೆಯು, ಕಾಲ ಪರಿಮಿತಿ ಅಧಿನಿಯಮದ 65 ನೇ ಅನುಚ್ಛೇದದ ಅಡಿಯಲ್ಲಿ ಹೂಡಲಾದ ದಾವೆಯಾಗಿರುತ್ತದೆ ಎಂಬುದನ್ನು ಗಮನಿಸಬೇಕಾಗಿರುತ್ತದೆ.

ಕಾಲ ಪರಿಮಿತಿ ಅಧಿನಿಯಮದ 6 ನೇ ಅನುಚ್ಛೇದವನ್ನು ಈ ಮುಂದಿನಂತೆ ಓದಲಾಗಿದೆ:

| **ಅನುಚ್ಛೇದ** | **ದಾವೆಯ ವಿವರಣೆ** | **ಕಾಲ ಪರಿಮಿತಿಯ ಅವಧಿ** | **ಪರಿಗಣನಾ ಅವಧಿ ಪ್ರಾರಂಭದ ಸಮಯ** |
|---|---|---|---|
| 65 | ಹಕ್ಕಿನ ಆಧಾರದ ಮೇಲೆ ಸ್ಥಿರ ಸ್ವತ್ತನ್ನು ಅಥವಾ ಅದರಲ್ಲಿನ ಯಾವುದೇ ಹಿತಾಸಕ್ತಿಯನ್ನು ಸ್ವಾಧೀನಪಡಿಸಿಕೊಳ್ಳಲು ದಾವೆ ......... | ಹನ್ನೆರಡು ವರ್ಷಗಳು | ಎದುರುದಾರರ ಸ್ವಾಧೀನತೆಯು ವಾದಿಗೆ ಪ್ರತಿಕೂಲ ವಾದಂದಿನಿಂದ |

ಓ.ಎಸ್.ಸಂಖ್ಯೆ 317/1956 ರಲ್ಲಿನ ವಿಭಜನೆಗೆ ಸಂಬಂಧಿಸಿದ ವ್ಯವಹರಣೆಗಳ ಕಾರಣದಿಂದ ಶ್ರೀಮತಿ ತೈರುನ್ನಿಸಾರವರಲ್ಲಿ ಹಕ್ಕು ನಿಹಿತವಾಗಿತ್ತೆಂದು ಮತ್ತು ವಾಸ್ತವವಾಗಿ, ದಾವಾ ಅನುಸೂಚಿತ ಸ್ವತ್ತುಗಳ ಖಾತಾ ಸಹ ಒಂದು ನಿರ್ದಿಷ್ಟ ಸಮಯದಲ್ಲಿ ಆಕೆಯ ಹೆಸರಿನಲ್ಲಿತ್ತೆಂದು ದೂರುದಾರರ ನಿರ್ದಿಷ್ಟ ವಾದವಾಗಿದೆ.



(vi) ಕಾಲ ಪರಿಮಿತಿ ಅಧಿನಿಯಮದ 65 ನೇ ಅನುಚ್ಛೇದದ ಉದ್ದೇಶಗಳಿಗೆ ಸಂಬಂಧಿಸಿದ ಹಕ್ಕಿನ ಪ್ರಶ್ನೆಯನ್ನು, ಸಂದರ್ಭೋಚಿತವಾಗಿ ಅರ್ಥೈಸಿಕೊಳ್ಳಬೇಕಾಗಿದೆ.ಪ್ರಸ್ತುತ ಮೊಕದ್ದಮೆಯಲ್ಲಿ ಒಂದು ಕಡೆ ವಿವಾದಿತರಾದ ಶ್ರೀಮತಿ ತೈರುನ್ನಿಸಾ ರವರು ಓ.ಎಸ್.ಸಂಖ್ಯೆ 317/1956 ರಲ್ಲಿನ ತೀರ್ಪಿನ ಕಾರಣದಿಂದ ಹಕ್ಕನ್ನು ಕ್ಲೇಮುಮಾಡಿದರೆ, ಶ್ರೀ ಹೆಚ್.ಸಿ. ನಾಗಪ್ಪ ಮತ್ತು ಆತನ ಕಾನೂನು ಸಮ್ಮತ ಪ್ರತಿನಿಧಿಗಳು ಮಾರಾಟ ಒಪ್ಪಂದದ ಅಡಿಯಲ್ಲಿ ಹಕ್ಕುಗಳನ್ನು ಕ್ಲೇಮು ಮಾಡಿದ್ದಾರೆ.ಆದ್ದರಿಂದ, ಶ್ರೀಮತಿ ತೈರುನ್ನಿಸಾ ಮತ್ತು ಆಕೆಯ ಸಹೋದರ ಕುಟುಂಬಕ್ಕೆ ಅಪರಿಚಿತರಾಗಿದ್ದಾರೆ.ಶ್ರೀಮತಿ ತೈರುನ್ನಿಸಾರವರ ಕಾನೂನು ಸಮ್ಮತ ಪ್ರತಿನಿಧಿಗಳು ಹಾಗೆಯೇ, ಶ್ರೀ ಹೆಚ್.ಸಿ. ನಾಗಪ್ಪರವರ ಕಾನೂನುಬದ್ಧ ಪ್ರತಿನಿಧಿಗಳ ಸ್ಥಾನದ ಹಿನ್ನಲೆಯಲ್ಲಿ, ಎದುರುದಾರರ ವಿರುದ್ಧ ಅವರು ಹೂಡಿದ ಕಾನೂನುಬದ್ಧ ಕ್ರಮದಲ್ಲಿ ಶ್ರೀಮತಿ ತೈರುನ್ನಿಸಾರವರ ಹಕ್ಕು, ನಿಜವಾದ ಮಾಲೀಕರನ್ನು ಹೊರತುಪಡಿಸಿ ಇಡೀ ಜಗತ್ತಿನ ವಿರುದ್ಧ ಉತ್ತಮವಾಗಿದೆ.

(vii) ದಿನಾಂಕ 03.03.2000 ರವರೆಗೆ ಎದುರುದಾರರು, ದೂರುದಾರರ ಹಕ್ಕನ್ನು ಒಪ್ಪಿಕೊಂಡಿದ್ದರು ಮತ್ತು ಒಪ್ಪಂದದ ಹಕ್ಕುಗಳನ್ನು ಜಾರಿಗೊಳಿಸಲು ಬಯಸಿದ್ದರು ಮತ್ತು ತದನುಸಾರವಾಗಿ, ಅಲ್ಲಿಯವರೆಗೆ ಎದುರುದಾರರ ವಾಸ್ತವಿಕ ಸ್ವಾಧೀನವು ದೂರುದಾರರು ಮಾಲೀಕರಾಗಿ ಹಿಡಿದಿಟ್ಟುಕೊಳ್ಳುವ ನ್ಯಾಯಸಮ್ಮತ ಸ್ವಾಧೀನವನ್ನು ತಗ್ಗಿಸಿಲ್ಲ ಎಂಬುದನ್ನು ಗಮನಿಸಬೇಕಾಗಿದೆ.ತತ್ಪರಿಣಾಮವಾಗಿ, ಆರು ವರ್ಷಗಳೊಳಗಾಗಿ ದಾವೆಯನ್ನು ಹೂಡಲಾಯಿತು ಮತ್ತು ಪೊವೆಲ್ ರವರ D ಮೊಕದ್ದಮೆಯ (ಮೇಅನಂತೆ) ಯಲ್ಲಿನ ನಿಯಮವನ್ನು ಅನ್ವಯಿಸಿ ಪ್ಯಾರಾ 6 (ಸಿ) (ii) ಮತ್ತು(iii) ರಲ್ಲಿ ಗಮನಿಸಲಾದಂತೆ, ಎದುರುದಾರರ ಸ್ವಾಧೀನವನ್ನು, ಅಗತ್ಯಪಡಿಸಿದ ಉದ್ದೇಶದೊಂದಿಗಿರಲಿಲ್ಲವೆಂದು ಮತ್ತು ಅದಕ್ಕನುಸಾರವಾಗಿ ಪ್ರತಿವಾದಿಗಳ ಅಂಥ 0 ಸ್ವಾಧೀನವನ್ನು, ದೂರುದಾರರಿಂದ ಸ್ವಾಧೀನವನ್ನು ತಪ್ಪಿಸುವುದೆಂದು ಅರ್ಥೈಸಿಕೊಳ್ಳಲಾಗುವುದಿಲ್ಲವೆಂದು ಅಭಿಪ್ರಾಯಪಡಬಹುದಾಗಿದೆ.ಅವರು ಹಾಗೆ ಮಾಡಿದ್ದರೆ, ದೂರುದಾರರ ಸ್ವಾಧೀನವು ಮುಂದುವರೆದಿದೆಯೆಂದು ಭಾವಿಸಲಾಗುತ್ತದೆ.



(viii) ಪರಿ -ವಿರುದ್ಧ ಕ್ಲಿಸ್ಟೋಲ್ಡ್ ಮತ್ತು ಇತರರು ಮೊಕದ್ದಮೆಯಲ್ಲಿ ಪ್ರಿವಿ ಕೌನ್ಸಿಲ್ ವಿಧಿಸಿದಂತಹ ನಿಯಮವು ಈ ಮುಂದಿನಂತಿದೆ.

" ಒಬ್ಬ ವ್ಯಕ್ತಿಯು ಮಾಲೀಕನೆಂದು ಪರಿಗಣಿಸಿದ ಪಾತ್ರದಲ್ಲಿ ಭೂಮಿಯ ಸ್ವಾಧೀನತೆಯನ್ನು ಹೊಂದಿರುವ ಮತ್ತು ಶಾಂತಚಿತ್ತನಾಗಿ ತನ್ನ ಮಾಲೀಕತ್ವದ ಸಾಮಾನ್ಯ ಹಕ್ಕುಗಳನ್ನು ಚಲಾಯಿಸಿದ ವ್ಯಕ್ತಿಯು ನಿಜವಾದ ಮಾಲೀಕನ ಹೊರತು ಸಮಸ್ತ ಜನರ ವಿರುದ್ಧ ಪರಿಪೂರ್ಣವಾದ ಉತ್ತಮ ಹಕ್ಕು ಹೊಂದಿದ್ದಾನೆಂಬುದು ವಿವಾದಿತವಾಗಲಾರದು ...... 99

ರಾಮ್ ದಾನ್ (ಮೃತರಾಗಿರುವುದರಿಂದ) ಅವರ ವಾರಸುದಾರರು ವಿರುದ್ಧ ಅರ್ಬನ್ ಇಂಪ್ರೋವ್ಮೆಂಟ್ ಟ್ರಸ್ಟ್ ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ಈ ಟ ಜ ನಿಯಮವನ್ನು ಅಂಗೀಕರಿಸಿ, ಅನುಮೋದಿಸಿದ್ದು, ಆ ಕಾನೂನನ್ನು ನಮ್ಮ ನ್ಯಾಯಾಲಯಗಳಲ್ಲಿಯೂ ಅನ್ವಯಮಾಡಬಹುದಾಗಿದೆ.ಅವುಗಳನ್ನು ಹಾಗೆ ಮಾಡಿದರೆ, ಕಾಲ ಪರಿಮಿತಿ ಅಧಿನಿಯಮದ 65 ನೇ ಅನುಚ್ಛೇದದ ಉದ್ದೇಶಕ್ಕಾಗಿ ಹಕ್ಕನ್ನು ಅರ್ಥೈಸಿಕೊಳ್ಳುವಾಗ, ಮೇಲಿನ ನಿಯಮದ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳಬಹುದಾಗಿದೆ.ಓ.ಎಸ್.ಸಂಖ್ಯೆ 317/1956 ರಲ್ಲಿ ವಿಭಜನೆಗೆ ಸಂಬಂಧಿಸಿದ ದಾವೆಯಿಂದ ಕಂಡುಬಂದಂತೆ ಮತ್ತು ನಿರ್ದಿಷ್ಟ ಸಮಯದಲ್ಲಿನ ಕಂದಾಯ ದಾಖಲೆಗಳನ್ನು ಗಮನಿಸಿದಾಗ ಶ್ರೀಮತಿ ತೈರುನ್ನಿಸಾರವರ ಹಕ್ಕು ಅವರ ಹೆಸರಿನಲ್ಲಿಯೇ ಇದೆ. ಶ್ರೀಮತಿ ತೈರುನ್ನಿಸಾ ಹಾಗೆಯೇ ವಿಪರ್ಯವಾಗಿ ಕುಟುಂಬಕ್ಕೆ ಹೊರಗಿನವರಾಗಿರುವ ಎದುರುದಾರರ ಸ್ವಾಧೀನತಾ ಹಕ್ಕು ಉನ್ನತಮಟ್ಟದ ಹಕ್ಕಾಗಿದ್ದು, ಕಾಲ ಪರಿಮಿತಿ ಅಧಿನಿಯಮದ 65 ನೇ ಅನುಚ್ಛೇದವನ್ನು ಅನ್ವಯಿಸಲು ಪರ್ಯಾಪ್ತವಾಗಿದೆ.

(ix) ಓ.ಎಸ್.ಸಂಖ್ಯೆ 237/1989 ರಲ್ಲಿ ನಿರ್ದಿಷ್ಟ ಪಾಲನೆಗಾಗಿ ಸಂಬಂಧಿಸಿದ ದಾವೆಯಲ್ಲಿನ ಎದುರುದಾರರು, ಎದುರುದಾರರ ಮಾಲೀಕತ್ವವನ್ನು ನಿರ್ದಿಷ್ಟವಾಗಿ ಒಪ್ಪಿಕೊಂಡಿದ್ದು ಇದು ಅಂಥ ಪರಿಹಾರವನ್ನು ತರುವಾಯ ಕೈಬಿಡಲಾಗಿದ್ದರೂ ನಿರ್ದಿಷ್ಟ ಪಾಲನೆಗಾಗಿ ಹೂಡಲಾದ ದಾವೆಯ ಆಧಾರವಾಗಿದೆ ಎಂಬುದನ್ನು ಸಹ ಗಮನಿಸಬೇಕಾಗಿರುತ್ತದೆ.ಆರ್.ಎ.ಸಂಖ್ಯೆ 50/1991 ರಲ್ಲಿ ಕೋರಿರುವಂತೆ ಪ್ರತಿಕೂಲ ಸ್ವಾಧೀನದ ಸಂಬಂಧದಲ್ಲಿ ಪರಿಹಾರವನ್ನು ಕೋರುವುದಕ್ಕೆ ಸಂಬಂಧಿಸಿದಂತೆಯೂ ಸಹ ಎದುರುದಾರರು, ಶ್ರೀಮತಿ ತೈರುನ್ನಿಸಾರವರ ಮಾಲೀಕತ್ವವನ್ನು ನಿಸ್ಸಂದಿಗ್ಧವಾಗಿಯೂ ಒಪ್ಪಿಕೊಂಡಿದ್ದಾರೆ.ಅಂಥ ನಿಲುವಿನ ಹಿನ್ನೆಲೆಯಲ್ಲಿ, ಶ್ರೀಮತಿ ತೈರುನ್ನಿಸಾರವರು ಮಾಲೀಕರಾಗಿರಲಿಲ್ಲವೆಂದು ಮತ್ತು ಆ ಹಕ್ಕು ಆಕೆಯ ಸಹೋದರನಲ್ಲಿ ನಿಹಿತವಾಗಿತ್ತೆಂದು ಈಗ ಮನವಿ ಮಾಡಲು ಎದುರುದಾರರ ನಡವಳಿಕೆಯಿಂದಾಗಿ ದೂರವಿರುತ್ತಾರೆ.ಇದಲ್ಲದೆ, ಒಬ್ಬ ಪಕ್ಷಕಾರರಿಗೆ, ಸಮ್ಮತಿಸಲು ಮತ್ತು ಅಸಮ್ಮತಿಸಲು ಅನುಮತಿ ನೀಡಲಾಗುವುದಿಲ್ಲ ಮತ್ತು ಶ್ರೀಮತಿ ತೈರುನ್ನಿಸಾರವರ ಹಕ್ಕನ್ನು ನಿರಾಕರಿಸುವ ಯಾವುದೇ ಮನವಿಯನ್ನು ತೆಗೆದುಕೊಳ್ಳಲು ಪ್ರತಿವಾದಿಗಳಿಗೆ ಈಗ ಅನುಮತಿ ನೀಡಲಾಗುವುದಿಲ್ಲ.ವಾಸ್ತವವಾಗಿ, ಪ್ರತಿಕೂಲ ಸ್ವಾಧೀನದ ನೈಜ ಮನವಿಯು, ಶ್ರೀಮತಿ ತೈರುನ್ನಿಸಾ ರವರು ಮಾಲೀಕರಾಗಿರುತ್ತಾರೆಂದು ಮತ್ತು ಎದುರುದಾರರು, ಶ್ರೀಮತಿ ತೈರುನ್ನಿಸಾ ರವರ ವಿರುದ್ಧವಾಗಿ ಪ್ರತಿಕೂಲ ಸ್ವಾಧೀನದ ಮೂಲಕ ಅವರ ಹಕ್ಕನ್ನು ಪರಿಪೂರ್ಣಗೊಳಿಸಿದ್ದರೆಂದು ಸ್ವೀಕರಿಸಿ ಅಂಗೀಕರಿಸುವುದನ್ನು ಆಧರಿಸಿರುತ್ತದೆ.ಹೀಗಿರುವಾಗ, ಈ ಹಿಂದಿನ ನಡವಳಿಕೆಯ ಹಿನ್ನಲೆಯಲ್ಲಿ ಯಾವುದೇ ಇತರ ತದ್ವಿರುದ್ಧ ವಿವಾದವನ್ನು ತೆಗೆದುಕೊಳ್ಳುವುದರಿಂದ ಎದುರುದಾರರನ್ನು ಪರಿಬಂಧಿಸಲಾಗಿರುತ್ತದೆ.

( x) ತದನುಸಾರವಾಗಿ, ದೂರುದಾರರು ಹಕ್ಕನ್ನು ಹೊಂದಿರಲಿಲ್ಲ ಎಂಬ ಉಭಯ ನ್ಯಾಯಾಲಯ ನಿರ್ಣಯವು ಸ್ಪಷ್ಟವಾಗಿ ತಪ್ಪಾಗಿರುತ್ತದೆ ಮತ್ತು ಕಾನೂನಿಗೆ ತದ್ವಿರುದ್ಧವಾಗಿರುತ್ತದೆ.ಹಾಗಾಗಿ, ಸದರಿ ನಿರ್ಣಯದಲ್ಲಿ ಹಸ್ತಕ್ಷೇಪ ಮಾಡುವುದು ಅಗತ್ಯ.



(xi) ಮೇಲಿನ ಚರ್ಚೆಯ ಹಿನ್ನಲೆಯಲ್ಲಿ, ಕಾನೂನಿನ ಗಮನಾರ್ಹ ಪ್ರಶ್ನೆ ಸಂಖ್ಯೆ 2 ಕ್ಕೆ ನಕಾರಾತ್ಮಕವಾಗಿ ಉತ್ತರಿಸಲಾಗಿರುತ್ತದೆ ಮತ್ತು ಅಧಿವಿಚಾರಣಾ ನ್ಯಾಯಾಲಯದ ಮತ್ತು ಮೊದಲನೇ ಅಪೀಲು ನ್ಯಾಯಾಲಯದ ನಿರ್ಣಯಗಳು ತಳ್ಳಿಹಾಕಲು ಅರ್ಹವಾಗಿವೆ.

(xii) ಪ್ರತಿಕೂಲ ಸ್ವಾಧೀನದ ಮನವಿಯನ್ನು ತಿರಸ್ಕರಿಸಿರುವಲ್ಲಿ ಮೊದಲನೇ ಅಪೀಲು ನ್ಯಾಯಾಲಯವು ನೀಡಿದ ತೀರ್ಮಾನವು ತಪ್ಪಾಗಿರುತ್ತದೆಂದು ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆಯ 22 ( 1) ನೇ ನಿಯಮದ 41 ನೇ ಕ್ರಮಾದೇಶದ ಅಡಿಯಲ್ಲಿನ ಅಧಿಕಾರಗಳನ್ನು ಚಲಾಯಿಸಿ, ಹಸ್ತಕ್ಷೇಪ ಮಾಡಲು ಅರ್ಹವಾಗಿರುತ್ತದೆ ೦ ದು ಎದುರುದಾರರ ಪರ ಮಾನ್ಯ ವಕೀಲರು ವಾದಿಸಿರುವಷ್ಟರಮಟ್ಟಿಗೆ, ಸದರಿ ವಿವಾದವನ್ನು, ಪರಿಗಣಿಸಲು ಕೋರಿರುವ ಕಾನೂನಿನ ಗಮನಾರ್ಹ ಪ್ರಶ್ನೆಯನ್ನು ಎತ್ತಿದೆಯೆಂದು ಅರ್ಥೈಸಿಕೊಳ್ಳುವ ಹಾಗಿಲ್ಲ.

III.ಕಾನೂನಿನ ಗಮನಾರ್ಹ ಪ್ರಶ್ನೆ ಸಂಖ್ಯೆ(iii)-

" ಓ.ಎಸ್.ಸಂಖ್ಯೆ 237/1989 ರಲ್ಲಿ ಎದುರುದಾರರಾಗಿದ್ದ ದೂರುದಾರರು ಸ್ವಾಧೀನಕ್ಕೆ ಸಂಬಂಧಿಸಿದಂತೆ ಪ್ರತಿಕ್ಷೇಮನ್ನು ಮಾಡಲು ವಿಫಲರಾಗಿದ್ದರೆಂದು, ಮತ್ತು ಅದಕ್ಕನುಸಾರವಾಗಿ, ಪ್ರಸ್ತುತ ದಾವೆಯನ್ನು ಪ್ರತಿಷೇದಿಸಲಾಗಿತ್ತೆಂಬ ಮಟ್ಟಿಗೆ ವಿಷಯ ಸಂಖ್ಯೆ 5 ರಲ್ಲಿ ಅಧಿವಿಚಾರಣಾ ನ್ಯಾಯಾಲಯವು ಸಕಾರಾತ್ಮಕವಾಗಿ ನಿರ್ಣಯ ಮಾಡಿರುವ ನಿರ್ಣಯವು ಭಾವಿತ ಪೂರ್ವ ನ್ಯಾಯನಿರ್ಣಯದ ಮೂಲಕ ದಾವೆಯನ್ನು ನಿರ್ವಹಿಸಿದ್ದಾರೆಂಬುದು (ಮೊದಲನೇ ಅಪೀಲು ನ್ಯಾಯಾಲಯವು ದೃಢೀಕರಿಸಿದಂತೆ) ಕಾನೂನಿನ ಇತ್ಯರ್ಥದ ಪ್ರತಿಪಾದನೆಗೆ ತದ್ವಿರುದ್ಧವಾಗಿದೆಯೇ?"

( 1) ಶ್ರೀಮತಿ ತೈರುನ್ನಿಸಾರವರು (ವಿಷಯ ಸಂಖ್ಯೆ -5 ರಲ್ಲಿ ತೀರ್ಪನ್ನು ದಾಖಲು ಮಾಡಲಾಗಿರುತ್ತದೆ) ಬರೆದುಕೊಟ್ಟ ಮಾರಾಟದ ಒಪ್ಪಂದದ ನಿರ್ದಿಷ್ಟ ಪಾಲನೆಯನ್ನು



ಕೋರಿ ಸಲ್ಲಿಸಿದ ಓ.ಎಸ್.ಸಂಖ್ಯೆ 237/1989 ರ ದಾವೆಯಲ್ಲಿ ಎದುರುದಾರರ ಸ್ಥಾನದಲ್ಲಿ ಲಿಖಿತ ಹೇಳಿಕೆಯನ್ನು ಸಲ್ಲಿಸುವಾಗ ಪ್ರತಿ ಕ್ಷೇಮನ್ನು ಮಾಡುವ ಮೂಲಕ ಸ್ವಾಧೀನವನ್ನು ವಾಪಸು ಪಡೆಯಲು ದೂರುದಾರರು ಕೋರಬೇಕಾಗಿತ್ತು ಎಂಬ ನಿರ್ಣಯವನ್ನು ಪರಿಶೀಲಿಸುವ ಅಗತ್ಯವಿದೆ.

(ii) ಸಿವಿಲ್ ಪ್ರಕ್ರಿಯಾ ಸಂಹಿತೆಯ 2 ನೇ ನಿಯಮದ ಕ್ರಮಾದೇಶ-II ರ ಅಡಿಯಲ್ಲಿ ಪೂರ್ವ ನ್ಯಾಯನಿರ್ಣಯದ ಅಥವಾ ನಿರ್ಬಂಧಕ್ಕೆ ಸಂಬಂಧಿಸಿದಂತೆ ನಿರ್ಣಯವನ್ನು ದಾಖಲಿಸುವ ಉದ್ದೇಶಕ್ಕಾಗಿ ಈ ಹಿಂದಿನ ದಾವೆಯಲ್ಲಿ ಮನವಿಗಳನ್ನು ನ್ಯಾಯಾಲಯದ ಮುಂದೆ ಇಡಬೇಕಾಗಿರುವುದು ಅವಶ್ಯಕವಾಗಿರುತ್ತದೆಂಬುದು ಕಾನೂನಿನ ಸುಸ್ಥಾಪಿತ ನಿಲುವು ಮತ್ತು ಸರ್ವೋಚ್ಚ ನ್ಯಾಯಾಲಯವು, ಗುರುಬಕ್ಸ್ ಸಿಂಗ್ -ವಿರುದ್ಧ-ಭೂರಾಲಾಲ್ ಮೊಕದ್ದಮೆಯಲ್ಲಿ ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

"6. ಮನವಿಯು ಒಂದು ತಾಂತ್ರಿಕ ಪ್ರತಿಷೇಧವಾಗಿರುವುದರಿಂದ, ಅದನ್ನು ತೃಪ್ತಿಕರವಾಗಿ ಸಾಬೀತುಪಡಿಸಬೇಕಾಗಿದೆಯೇ ಹೊರತು ಅದನ್ನು ಕೇವಲ ತಾರ್ಕಿಕ ಕಾರಣವನ್ನು ಕೊಡುವುದರ ಆಧಾರದ ಮೇಲೆ ಪೂರ್ವಭಾವನೆ ಮಾಡಲಾಗುವುದಿಲ್ಲ.ಈ ಕಾರಣಕ್ಕಾಗಿಯೇ, ಎದುರುದಾರರು, ಈ ಹಿಂದಿನ ದಾವೆಯಲ್ಲಿನ ಮನವಿಗಳನ್ನು ಸಾಕ್ಷಿಯಾಗಿ ಸಲ್ಲಿಸಿದರೆ ಮತ್ತು ಆ ಮೂಲಕ ...... ಎರಡು ದಾವೆಗಳಲ್ಲಿ ಕಾರ್ಯ

ಕಾರಣದ ಗುರುತನ್ನು ನ್ಯಾಯಾಲಯಕ್ಕೆ ಸಾಬೀತು ಪಡಿಸಿದರೆ ಮಾತ್ರ, ಸಿವಿಲ್ ಪ್ರಕ್ರಿಯಾ ಸಂಹಿತೆಯ 2 ನೇ ನಿಯಮದ ಕ್ರಮಾದೇಶ-II ರ ಅಡಿಯಲ್ಲಿ ಪ್ರತಿಷೇಧದ ಮನವಿಯನ್ನು ಸಾಬೀತುಪಡಿಸಬಹುದು ಎಂಬುದನ್ನು ನಾವು ಪರಿಗಣಿಸುತ್ತೇವೆ.

7. ಕೇವಲ, ಪೂರ್ವ ನ್ಯಾಯನಿರ್ಣಯದ ಮನವಿಯ ಪ್ರಕರಣದಲ್ಲಿಯಂತೆಯೇ, ಪ್ರತಿಬಂಧವೆಂದು ವಾದಿಸಲ್ಪಟ್ಟ ತೀರ್ಪ

10. ಎಐಆರ್ 1964 ಎಸ್ಸಿ 1810 ಕರ್ನಾಟಕ ತೀರ್ಪುಗಳ ವರದಿ 2021

ಮತ್ತು ಡಿಕ್ರಿಯ ದಾಖಲೆ ಅಸ್ತಿತ್ವದಲ್ಲಿಲ್ಲದಿರುವುದನ್ನು ಸಾಬೀತುಗೊಳಿಸಲಾಗುವುದಿಲ್ಲ, ಸಿವಿಲ್ ಪ್ರಕ್ರಿಯಾ ಸಂಹಿತೆಯ 2 ನೇ ನಿಯಮದ ಕ್ರಮಾದೇಶ-II ರ ಅಡಿಯಲ್ಲಿ, ಪ್ರತಿಷೇಧವನ್ನು ಸೃಜಿಸಲಾಗುವುದೆಂದು ಹೇಳಲಾಗಿರುವ ಈ ಹಿಂದಿನ ದಾವೆಯಲ್ಲಿ ವಾದಪತ್ರದ ಪುರಾವೆಯನ್ನು ಹೊರತುಪಡಿಸಿ ಮನವಿಯನ್ನು ಮಾಡಲಾಗುವುದಿಲ್ಲ.ಮನವಿಯು, ಮೂಲತಃ ಪ್ರತಿವಾದದ ಎರಡು ದಾವೆಗಳಲ್ಲಿ ಕಾರ್ಯ ಕಾರಣವನ್ನು ಗುರುತಿಸುವುದರ ಮೇಲೆ ಆಧಾರಿತವಾಗಿರುವುದರಿಂದ, ಪ್ರತಿಷೇಧವನ್ನು ಪ್ರಶ್ನಿಸುವ ಪ್ರತಿವಾದವು ಹಿಂದಿನ ದಾವೆಯಲ್ಲಿ ಕಾರ್ಯ ಕಾರಣವನ್ನು ಅಗತ್ಯವಾಗಿ ಸಾಬೀತುಪಡಿಸಬೇಕಾಗಿರುತ್ತದೆ.ಕಾರ್ಯ ಕಾರಣವು, ದೂರುದಾರರು ಕ್ಲೇಮು ಮಾಡಿದ್ದ ಪರಿಹಾರಕ್ಕೆ ಹಕ್ಕನ್ನು ಬೆಂಬಲಿಸುತ್ತದೆಂದು ಆತನು ಆರೋಪಿಸಿದ್ದ ಸಂಗತಿಗಳಾಗಿರುತ್ತವೆ.ಯಾವ ವಾದಪತ್ರದಲ್ಲಿ ಅ ಂ ತಹ ಸ ಂ ಗತಿಗಳನ್ನು ಆಪಾದಿಸಲಾಗಿತ್ತೋ ಅಂತಹ ವಾದಪತ್ರವನ್ನು ನ್ಯಾಯಾಲಯದ ಮುಂದಿಡದೇ, ಎದುರುದಾರರು, ಕ್ಲೇಮು ಮಾಡಲಾಗಿದ್ದ ಪರಿಹಾರಗಳಿಗೆ ಸಂಬಂಧಿಸಿದಂತೆ ಅಂತಹ ಸಂಗತಿಗಳು ಏನಾಗಿದ್ದಿರಬಹುದು ಎಂಬುದನ್ನು ಕಡಿತಗೊಳಿಸುವ ಪ್ರಕ್ರಿಯೆಯ ಮೂಲಕ ಭಾವಿಸಲು ಅಥವಾ ತೀರ್ಮಾನಕ್ಕೆ ಬರಲು ನ್ಯಾಯಾಲಯವನ್ನು ಕೋರಲಾಗುವುದಿಲ್ಲ ......

(ii) ಪ್ರಸ್ತುತ ಮೊಕದ್ದಮೆಯಲ್ಲಿ, ಓ.ಎಸ್.ಸಂಖ್ಯೆ:237/1989 ರಲ್ಲಿನ ವಾದಪತ್ರವನ್ನಾಗಲಿ ಇಲ್ಲವೇ ಲಿಖಿತ ಹೇಳಿಕೆಯನ್ನಾಗಲಿ ಅಧಿವಿಚಾರಣಾ ನ್ಯಾಯಾಲಯದ ಮುಂದೆ ಮಂಡಿಸಲಾಗಿಲ್ಲ.ಎದುರುದಾರರು, ಓ.ಎಸ್.ಸಂಖ್ಯೆ:237/1989 ರಲ್ಲಿನ ನಿರ್ದಿಷ್ಟ ಪಾಲನೆಗಾಗಿ ದಾವೆಯನ್ನು ಪ್ರತಿವಾದಿಸುವಾಗ, ಸ್ವಾಧೀನಕ್ಕೆ ಸಂಬಂಧಿಸಿದ ಪ್ರತಿ ಕ್ಲೇಮನ್ನು ಪಡೆಯಲು ದೂರುದಾರರು ಕೋರಬೇಕಾಗಿತ್ತು ಎಂಬುದು ಇಲ್ಲಿನ ನಿರ್ದಿಷ್ಟ ಮೊಕದ್ದಮೆಯಾಗಿರುತ್ತದೆ.ಮನವಿ ಎಂದರೆ, ಓ.ಎಸ್.ಸಂಖ್ಯೆ:

237/1989 ರಲ್ಲಿನ ವಾದಪತ್ರವು ಇಲ್ಲದಿರುವುದರಿಂದ ಪ್ರತಿ ಕ್ಲೇಮನ್ನು ಮಾಡುವ ಮೂಲಕ ದೂರುದಾರರು ಸ್ವಾಧೀನವನ್ನು ಪಡೆಯಲು 104 ಶ್ರೀಮತಿ ನೂರ್ ಅಫ್ತಾಬ್ ಪರ್ವಿನ್ ಹಾಗೂ ಇತರರು -ವಿರುದ್ಧ ಶ್ರೀ ಹೆಚ್.ಎನ್. ಚಂದ್ರಶೇಖರ್ (ಮೃತ) ರವರ ಕಾನೂನು ವಾರಸುದಾರರು ಹಾಗೂ ಇತರರು 1557

ಕೋರಬೇಕಾಗಿದೆ ಎಂಬ ಬಗ್ಗೆ ನಿರ್ಣಯವನ್ನು ದಾಖಲಿಸಲು ಓ.ಎಸ್.ಸಂಖ್ಯೆ:237/1989 ರಲ್ಲಿನ ತೀರ್ಪನ್ನು ಹಾಜರುಪಡಿಸುವುದಷ್ಟೇ ಸಾಕಾಗುವುದಿಲ್ಲ ಮತ್ತು ತದನುಸಾರವಾಗಿ, ಸ್ವಾಧೀನವನ್ನು ಪಡೆದುಕೊಳ್ಳಲು ಕೋರಿ ದೂರುದಾರರು ಸಲ್ಲಿಸಿರುವ ಪ್ರಸ್ತುತ ದಾವೆಯನ್ನು, ಭಾವಿತ ಪೂರ್ವ ನ್ಯಾಯನಿರ್ಣಯದ ನಿಯಮದಿಂದ ನಿರ್ಬಂಧಿಸಲಾಯಿತೆಂದು ನಿರ್ಣಯಿಸುವುದು ಸಮರ್ಥನೀಯವಾಗಿರುವುದಿಲ್ಲ.

(iv) ಈ ಹಿಂದಿನ ವ್ಯವಹರಣೆಗಳಲ್ಲಿ ಪ್ರತಿಕ್ಲೇಮನ್ನು ಸಲ್ಲಿಸಲು ವಿಫಲವಾದ ಪರಿಣಾಮವಾಗಿ ಪ್ರಸ್ತುತ ದಾವೆಯನ್ನು ನಿರ್ಬಂಧಿಸಲಾಗಿದೆಯೇ ಮತ್ತು ತತ್ಪರಿಣಾಮವಾಗಿ ಅದಕ್ಕನುಸಾರವಾಗಿ, ಪೂರ್ವ ನ್ಯಾಯನಿರ್ಣಯದ ನಿಯಮದ ಮೂಲಕ ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆಯ 2 ನೇ ನಿಯಮ ಕ್ರಮಾದೇಶ-II ರ ಮೂಲಕವೂ ಸಹ ಪ್ರಸ್ತುತ ದಾವೆಯನ್ನು ನಿರ್ಬಂಧಿಸಲಾಗಿದೆಯೇ ಎಂಬ ನಿರ್ಣಯವನ್ನು ದಾಖಲು ಮಾಡುವ ಉದ್ದೇಶಕ್ಕಾಗಿ, ಈ ಹಿಂದಿನ ದಾವೆಯಲ್ಲಿ ಮತ್ತು ಪ್ರಸ್ತುತ ದಾವೆಯಲ್ಲಿ ಪರಿಶೀಲಿಸುವ ಅಗತ್ಯವಿರುವ ಕಾರ್ಯ ಕಾರಣವನ್ನು ಗುರುತಿಸಲಾಗಿರುತ್ತದೆ.ಕಾರ್ಯ ಕಾರಣವನ್ನು ಸಂಪೂರ್ಣ ವಾದಪತ್ರವನ್ನು ಓದುವುದರ ಮೇಲೆ ಅರ್ಥೈಸಿಕೊಳ್ಳಬೇಕಾಗಿರುತ್ತದೆಯೇ ಹೊರತು ವಾದಪತ್ರದ ನಿರ್ದಿಷ್ಟ ಪ್ಯಾರಾದಲ್ಲಿ ವಿವರಿಸಿರುವಂತಹ ಕಾರ್ಯ ಕಾರಣಕ್ಕೆ ಅಗತ್ಯವಾಗಿ ಅ ಪರಿಮಿತವಾಗಿರುವುದಿಲ್ಲ.ಈ ಹಿಂದಿನ ಮತ್ತು ಪ್ರಸ್ತುತ ದಾವೆಯ ಕಾರ್ಯ ಕಾರಣದ ಗುರುತನ್ನು ಸಾಬೀತುಪಡಿಸದಿದ್ದರೆ, ಪ್ರಸ್ತುತ ದಾವೆಯನ್ನು ನಿರ್ಬಂಧಿಸಲಾಗಿದೆಯೆಂದು ಹೇಳಲಾಗುವುದಿಲ್ಲ.ಅಂತಹ ತೀರ್ಮಾನಕ್ಕೆ ಬರಲು, ಮನವಿಗಳು ಅತ್ಯಾವಶ್ಯಕವಾಗಿದ್ದು, ಪ್ರಸ್ತುತ ಮೊಕದ್ದಮೆಯಲ್ಲಿ ಅವು ಇಲ್ಲವಾಗಿವೆ.ಮನವಿಗಳು ಇಲ್ಲದಿರುವುದರಿಂದ, ಕಾನೂನಿನ ಗಮನಾರ್ಹ ಪ್ರಶ್ನೆಯಲ್ಲಿ ಸುತ್ತುವರಿದಿರುವಂತೆ ವಿವಾದದ ಗುಣಾರ್ಹತೆಗಳ ಬಗ್ಗೆ ಮತ್ತಷ್ಟು ವಿಚಾರಣೆ ಮಾಡುವ ಅಗತ್ಯತೆ ಉದ್ಭವವಾಗುವುದಿಲ್ಲ.ಹಾಗಾಗಿ, ಸಿವಿಲ್ ಪ್ರಕ್ರಿಯಾ ಸಂಹಿತೆಯ 2 ನೇ ನಿಯಮ ಕ್ರಮಾದೇಶ-II ರ ಅಡಿಯಲ್ಲಿ ಕಾನೂನಿನ ಮೂಲ ನಿಯಮಕ್ಕೆ ಸಂಬಂಧಿಸಿದಂತೆ, ವಿರ್ಗೊ ಇಂಡಸ್ಟ್ರೀಸ್ (ಇಂಜಿನಿಯರಿಂಗ್) ಪ್ರೈವೇಟ್ ಅಮಿಟೆಡ್ ವಿರುದ್ಧ-ವೆಂಚುರ್ಟೆಕ್ ಸಲ್ಯೂಷನ್ಸ್ ಪ್ರೈವೇಟ್ ಅಮಿಟೆಡ್ 11 " ಮೊಕದ್ದಮೆಯಯಲ್ಲಿ 1558



ಮತ್ತು ವ್ಯಾನ್ ವಿಭಾಗ್ ಕರ್ಮಚಾರಿ ಗ್ರಿಹ ನಿರ್ಮಾಣ್ ಸಹಕಾರಿ ಸಂಸ್ಥೆ ಮತ್ಯಾಡಿಟ್ (ರಿಜಿಸ್ಟರ್) -ವಿರುದ್ಧ- ರಮೇಶ್ ಚಂದರ್ ಮತ್ತು ಇತರರು ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳ ಮೇಲೆ

ಅವಲಂಬಿತವಾಗಿರುವುದು ಚ ಮನವಿಗಳು ಇಲ್ಲದಿರುವಾಗ ಎದುರುದಾರರ ನೆರವಿಗೆ ಬರುವುದಿಲ್ಲ, ಮನವಿಗಳಿಲ್ಲದೆ, ಆಗ್ರಹಿಸಿದ ವಿಷಯದ ಬಗ್ಗೆ ಯಾವುದೇ ನಿರ್ಣಾಯಕ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ.ತದನುಸಾರವಾಗಿ ಕಾನೂನಿನ ಗಮನಾರ್ಹ ಪ್ರಶ್ನೆ ಸಂಖ್ಯೆ 3 ಕ್ಕೆ ಸಕಾರಾತ್ಮಕವಾಗಿ ಉತ್ತರಿಸಲಾಗಿರುತ್ತದೆ.

(  v) ಇದರ ಪರಿಣಾಮವಾಗಿ, ಈ ಅಪೀಲನ್ನು ವೆಚ್ಚಗಳೊಂದಿಗೆ ಪುರಸ್ಕರಿಸಲಾಗಿದೆ.ಆರ್.ಎ.ಸಂಖ್ಯೆ 213/2011 ರಲ್ಲಿ I ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು, ಚಿಕ್ಕಮಗಳೂರು ಇವರುದಿನಾಂಕ: 27.02.2015 ರಂದು ಹೊರಡಿಸಿದ ತೀರ್ಪು ಮತ್ತು ಡಿಕ್ರಿಯನ್ನು ರದ್ದುಗೊಳಿಸಲಾಗಿರುತ್ತದೆ.ತತ್ಪರಿಣಾಮವಾಗಿ, ಓ.ಎಸ್.ಸಂಖ್ಯೆ 95/2006 ರಲ್ಲಿ ಆರಂಭದ ವಿಚಾರಣಾ ನ್ಯಾಯಾಲಯವು ಎಂದರೆ, ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಜೆಎಂಎಫ್ಸಿ, ತರೀಕೆರೆ ಇವರುದಿನಾಂಕ: 26.11.2010 ರಂದು ಹೊರಡಿಸಿದ ತೀರ್ಪು ಮತ್ತು ಡಿಗ್ರಿಯನ್ನು ಸಹ ರದ್ದುಗೊಳಿಸಲಾಗಿರುತ್ತದೆ ಮತ್ತು ಮೇಲಿನ ಚರ್ಚೆಯ ಹಿನ್ನಲೆಯಲ್ಲಿ ದಾವೆಯನ್ನು ಡಿಕ್ರಿ ಮಾಡಲಾಗಿರುತ್ತದೆ.

(vi) ಈ ದಿನದಿಂದ ಮೂರು ತಿಂಗಳುಗಳ ಅವಧಿಯ ಒಳಗಾಗಿ ದೂರುದಾರರಿಗೆ ಶಿವಾ ಅನುಸೂಚಿತ ಸ್ವತ್ತುಗಳ ಸ್ವಾಧೀನವನ್ನು ಹಸ್ತಾಂತರಿಸುವಂತೆ ಪ್ರತಿವಾದಿಗಳಿಗೆ ನಿರ್ದೇಶಿಸಲಾಗಿರುತ್ತದೆ.ಸಿವಿಲ್ ಪ್ರಕ್ರಿಯಾ ಸಂಹಿತೆಯ 12 ನೇ ನಿಯಮದ 20 ನೇ ಕ್ರಮಾದೇಶದ ಮೇರೆಗೆ ದಾವೆಯ ದಿನಾಂಕದಿಂದ ಸ್ವಾಧೀನವನ್ನು ವಿಲೆ ಮಾಡುವ ದಿನಾಂಕದವರೆಗೆ ಮಧ್ಯಕಾಲೀನ ಲಾಭಗಳಿಗೆ ಸಂಬಂಧಪಟ್ಟಂತೆ ಪ್ರತ್ಯೇಕ ವಿಚಾರಣೆಯನ್ನು ಮಾಡಲಾಗುವುದು.

12. (2010) 14 ಎಸ್ಸಿಸಿ 596